ಉತ್ಥಾನ

ಬೆಲೆ : ರೂ ೧೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೬ ಜುಲೈ -೨೦೧೬ ಸಂಚಿಕೆ - ೧೨

ಪರಿಸರ ನಾಶ, ಜೀವ ಸಂಕುಲದ ಜೀವಂತ ಮರಣ

***

ಸ್ವಧರ್ಮ ಹಿರಿದೂ ಅಲ್ಲ, ಕಿರಿದೂ ಅಲ್ಲ

***

ಗೋಪಾಲಕೃಷ್ಣ ಗೋಖಲೆ ನೆನೆದು

***

ಪು[illegible] ಮಹತ್ವ

ಜನಪದ ವಿಚಾರದಲ್ಲಿ

ಜುಲೈ- ೨೦೧೬

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಜುಲೈ - ೨೦೧೬
ಸಂಪುಟ - ೧೬
ಸಂಚಿಕೆ - ೧೨

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - 571431
ಮಂಡ್ಯ ಜಿಲ್ಲೆ

ಫೋನ್ : 9141700812
08236 - 299854
email :
janapada@yahoo.com
Web: janapada.org

ತ್ಯಾಗ...

ಮೇಣದ ಬತ್ತಿ
ಬೆಳಕ ಬಿತ್ತಿ
ಕನೆಗೂ
ಉರಿದು ಹೋಯಿತು
ತನಗಾದರೂ ತುಸು ಬೆಳಕ
ಉಳಿಸಿಕೊಳ್ಳದೆ!
ಕರ್ಪೂರದಾರತಿ
ಕಂಪ ಹರಡಿ
ಕೊನೆಗೂ
ಕರಗಿಹೋಯಿತು
ತನಗಾದರೂ ತುಸು ಕಂಪ
ಉಳಿಸಿಕೊಳ್ಳದೆ!
ಒರಳ ಕಲ್ಲು
ಸವಿಯ ಸೂಸಿ
ಕೊನೆಗೂ
ಸವೆದು ಹೋಯಿತು
ತನಗಾದರೂ ತುಸು ರುಚಿ
ಉಳಿಸಿಕೊಳ್ಳದೆ!
ಹರಿದ ನದಿ
ದಾಹ ನೀಗಿಸಿ
ಕೊನೆಗೂ
ಬತ್ತಿ ಹೋಯಿತು
ತನಗಾದರೂ ತುಸು ಪಸೆ
ಉಳಿಸಿಕೊಳ್ಳದೆ!
ಕೆಲವರು
ಜೀವತೇದು
ಕೊನೆಗೂ
ಸಂದು ಹೋದರು
ತಮಗಾದರೂ ತುಸು ಬದುಕು
ಉಳಿಸಿಕೊಳ್ಳದೆ!

–ವಾಸುದೇವ ನಾಡಿಗ್

ಪರಿಸರ ನಾಶ ಸಮಸ್ತ ಜೀವಸಂಕುಲದ ಜೀವಂತ ಮರಣ

- ಸುರೇಂದ್ರ ಕೌಲಗಿ

೨೦೧೬ ಜೂನ ೫, ಅಂತರಾಷ್ಟ್ರೀಯ ಪರಿಸರ ದಿನಾಚರಣೆ, ಕಾಲ ಪ್ರವಾಹದಲ್ಲಿ ಹರಿದುಹೋಯಿತು. ಎಂದಿನಂತೆ ಜಗತ್ತು ಆ ದಿನವನ್ನು ಮರೆಯಿತು. ಬರುವ ವರ್ಷವೇ ಆ ದಿನ ನೆನಪಾದಲ್ಲಿ ಆಶ್ಚರ್ಯವೇನಿಲ್ಲ. ಕಳೆದುಹೋದ ವರ್ಷದಿಂದ ಬರುವ ವರ್ಷದ ಪರಿಸರ ದಿನಾಚರಣೆಯವರೆಗಿನ ಒಂದು ವರ್ಷದ ಅವಧಿಯಲ್ಲಿ ಜಾಗತಿಕ ಪರಿಸರಪ್ರಪಂಚದಲ್ಲಿ ಬಹಳಷ್ಟು ಹಾನಿಯಾಗಿರುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ವರ್ಷದಿಂದ ವರ್ಷಕ್ಕೆ ಪರಿಸರದ ಉನ್ನತಿಗಿಂತ ಅವನತಿಯೇ ಹೆಚ್ಚಾಗುತ್ತಾ ಹೋಗುತ್ತಿದೆ. ದುಃಖದ ಸಂಗತಿಯೇನೆಂದರೆ ಪ್ರಕೃತಿಯ ಅವನತಿಯ ಜೊತೆಗೆ ಜನರ ಆರೋಗ್ಯಕರ ಚಿಂತನೆಯ ರೀತಿಯೂ ಅವನತಿಗೊಳ್ಳುತ್ತಿದೆ. ಕೇವಲ ಜನ್ಮ ಪಡೆದ ಕಾರಣದಿಂದ ಮಾನವರು ಜನರಾಗುತ್ತಿದ್ದಾರೆಯೇ ಹೊರತು ನರನಿಂದ ನಾರಾಯಣರಾಗುತ್ತಿಲ್ಲ. ಪಶು ಹೇಗೆ ತಾನು ಯಾವುದನ್ನೇ ನಂಬಬೇಕಾದರೆ ಅದನ್ನು ಪ್ರತ್ಯಕ್ಷವಾಗಿ ನೋಡಬೇಕು ಆದ್ದರಿಂದಲೇ ಅದನ್ನು ಪಶ್ಯತಿ ಇತಿ ಪಶುಃ ಎಂದು ಕರೆಯುತ್ತೇವೆ. ಅದರಂತೆಯೇ ಆಧುನಿಕ ಮಾನವ ಪ್ರಕೃತಿಯಲ್ಲಿರುವ ಪ್ರತಿಯೊಂದನ್ನು ಪರೀಕ್ಷಿಸುತ್ತ ದೇವನಾಗುವ ಬದಲು ಪಶುವಾಗುತ್ತಿದ್ದಾನೆ; ಧನದ ಆಶೆಯಿಂದ ತನ್ನ ಜೀವಿತ್ತೋದ್ದೇಶದ ಗುರಿಯಾಗಬೇಕಿದ್ದ ಆತ್ಮಜ್ಞಾನವನ್ನು ಸಂಪಾದಿಸುವ ಪ್ರಯತ್ನವನ್ನು ಕೈಬಿಟ್ಟಿದ್ದಾನೆ. ಅಷ್ಟೇ ಅಲ್ಲ, ಆತ್ಮಜ್ಞಾನದ ಘಾತಕನಾಗಿ ಗಾಢವಾದ ಅಂಧಕಾರದಲ್ಲಿ ಬಿದ್ದು ಆಸುರಿ ಮನೋವೃತ್ತಿಯನ್ನು ಬೆಳೆಸಿಕೊಳ್ಳುತ್ತಿದ್ದಾನೆ. ಅದರ ಪರಿಣಾಮವೇ ಇಂದಿನ ಪ್ರಕೃತಿಯ ವಿನಾಶ ಮತ್ತು ಪರಿಸರ ಮಾಲ್ಯಿನ್ಯ. 'ಪ್ರಮಾದ್ಯತ್ವಂ ವಿತ್ತ ಮೋಹೇನ ಮೂಢಂ' ಎಂಬ ಉಕ್ತಿಯಂತೆ ಇಂದು ಮಾನವ ಪ್ರಕೃತಿಯನ್ನು ಲೂಟಿಮಾಡಿ ದೊಡ್ಡ ಪ್ರಮಾದವನ್ನು ಮಾಡುತ್ತಿದ್ದಾನೆ. ವಿತ್ತ ಮೋಹದ ಕಾರಣದಿಂದ ಅವನು ಎಲ್ಲ ಪಂಚಭೂತಗಳನ್ನು ನಾಶಮಾಡುತ್ತಿದ್ದಾನೆ. ಆ ಹಾಳಾಗುವಿಕೆ ಎಷ್ಟು ಗಂಭೀರವಾಗಿದೆಯೆಂದರೆ ಮಾನವ ತಾನು ಸ್ವತಃ ಉಸಿರಾಡುವ ಗಾಳಿ, ಕುಡಿಯುವ ನೀರು, ವಾಸವಾಗಿರುವ ಭೂಮಿ ಎಲ್ಲವನ್ನು ಕಲುಶಿತಗೊಳಿಸಿದ್ದಾನೆ ತಾನೇ ಸಜೀವವಾಗಿ ಮರಣ ಹೊಂದುತ್ತಿದ್ದಾನೆ. ಜಗತ್ತಿನ ಮೇಲಿನ ಸಮಸ್ತ ಜೀವ ಕುಲಕ್ಕೆ ಆಧಾರವಾಗಿರುವ

ಅರಣ್ಯಗಳನ್ನು ನಾವು ಮಾನವರು ಅವ್ಯಾಹತವಾಗಿ ನಾಶಮಾಡುತ್ತಿದ್ದೇವೆ. ದೇಶದಲ್ಲಿ ಶೇ.೩೩%ರಷ್ಟು ಅರಣ್ಯವಿರಬೇಕು ಆದರೆ ಅದು ಈಗ ಭಾರತದ ಮಟ್ಟಿಗೆ ಹೇಳುವುದಾದರೆ ದೇಶದ ಇಡಿ ಸಂಸ್ಕೃತಿ ಅರಣ್ಯ ಮೂಲದಿಂದ ರೂಪಿತವಾಗಿದೆ. ರಾಮಾಯಣ, ಮಹಾಭಾರತ ಮತ್ತು ಉಪನಿಷತ್ತು ಮುಂತಾದ ಶ್ರೇಷ್ಠ ಸಾಹಿತ್ಯದ ನಿರ್ಮಾಣ ಅರಣ್ಯಗಳಲ್ಲಿಯೇ ಆಯಿತು. ವ್ಯಾಸರು ಬ್ರಹ್ಮಸೂತ್ರವನ್ನು ಅರಣ್ಯದಲ್ಲಿಯೇ ಬರೆದರು. ಪಾಣಿನಿ ಋಷಿ ತಮ್ಮ ಶಿಷ್ಯರಿಗೆ ಅರಣ್ಯದಲ್ಲಿ ಕುಳ್ಳಿರಿಸಿಕೊಂಡೆ ಶಿಕ್ಷಣ ಕೊಟ್ಟರು. ಭಾರತದ ಸಂಸ್ಕೃತಿ ನಗರದ್ದೆ ಅಥವಾ ಗ್ರಾಮೀಣದ್ದೆ ಎಂಬ ಚರ್ಚೆ ನಡೆಯುತ್ತಿದ್ದಾಗ ಗುರುದೇವ್ ರವೀಂದ್ರನಾಥ ಠಾಕೂರರು "ನಮ್ಮ ಸಂಸ್ಕೃತಿ ಆರಣ್ಯಕ ಸಂಸ್ಕೃತಿ ಎಂದು ಉತ್ತರಿಸಿದರು. ಈಗ ಅರಣ್ಯದ ಪ್ರಮಾಣ ಶೇ.೧೯% ಕ್ಕೆ ಇಳಿದಿದೆ. ಈ ಕಾರಣದಿಂದಾಗಿ ಅನೇಕ ವನ್ಯಜೀವ ಸಂಕುಲಗಳು ಕಣ್ಮರೆಯಾಗಿವೆ. ಗುಬ್ಬಚ್ಚಿಗಳು ಸೇರಿದಂತೆ ಕೆಲವು ವಿಶಿಷ್ಟ ಪ್ರಾಣಿಗಳ ವಂಶವಾಹಿನಿಯೇ ಇಲ್ಲದಂತಾಗಿದೆ. ವನ್ಯಜೀವಿಗಳೆಲ್ಲವು, ಅವುಗಳಿಗೆ ವಾಸಿಸಲು ಸ್ಥಳವಿಲ್ಲದೆ ನಾಡಿನತ್ತ ದಾಳಿಮಾಡುತ್ತಿವೆ. ಈ ಹಾವಳಿಯನ್ನು ತಪ್ಪಿಸುವುದಕ್ಕಾಗಿ ಕೇಂದ್ರ ಸರ್ಕಾರದಲ್ಲಿಯ ಪರಿಸರ ಮಂತ್ರಿ ಪ್ರಕಾಶ್ ಜಾವಡೆಕರರು ದಾಳಿಮಾಡುವ ಪ್ರಾಣಿಗಳನ್ನು ಕೊಲ್ಲಬಹುದೆಂದು ಆದೇಶ ಹೋರಡಿಸಲಿದ್ದಾರೆ. ಇದರಿಂದಾಗಿ ಬಿಹಾರಿನಲ್ಲಿರುವ ನೀಲಗಾಯಿ ಮತ್ತು ಕಾಡುಕರಡಿಗಳು, ಗೋವಾದಲ್ಲಿಯ ನವಿಲಗಳು ನಾಶವಾಗುವ ಭಯವಿದೆ. ಪ್ರತಿವರ್ಷ ಸುಮಾರು ೫೦೦ ಜನರು ಪ್ರಾಣಿಗಳ ದಾಳಿಯಿಂದ ಸಾಯುತ್ತರಾದರೂ ಯಾವ ಪ್ರಾಣಿಗಳ ನಾಶಕ್ಕಾಗಿ ಕೇಂದ್ರ ಸರ್ಕಾರ ಆದೇಶ ಹೊರಡಿಸಲಿದೆಯೋ ಆ ಪ್ರಾಣಿಗಳು ಜನರನ್ನು ಸಾಯಿಸುವಂಥವಲ್ಲ. ಪ್ರಾಣಿಜನ್ಯ ಕಾಯಿಲೆಗಳು ಬರದಂತೆ ಕ್ರಮಕೈಗೊಳ್ಳಬೇಕು ದಾಳಿಯಾಗದಂತೆ ನೋಡಿಕೋಳ್ಳಬೇಕು. ಈ ಪರ್ಯಾಯ ಕ್ರಮಗಳನ್ನು ಬಿಟ್ಟು ಪ್ರಾಣಿಗಳನ್ನೇ ನಾಶಮಾಡಿದರೆ ಅವುಗಳ ಸಂಖ್ಯೆ ಕಡಿಮೆಯಾಗುತ್ತದೆ ಮತ್ತು ಪರಿಸರ ನಾಶವಾಗುತ್ತದೆ. ಪರಿಸರ ನಾಶವೆಂದರೆ ಸಮಸ್ತಜೀವ ಸಂಕುಲದ ನಾಶವೇ. ೧೭೮೦ರ ದಶಕದಲ್ಲಿ ಬೆಂಗಳೂರು ನಗರದ ಗರಿಷ್ಟ ಉಷ್ಣಾಂಶ ಕೇವಲ ೧೪ ಡಿಗ್ರಿಯಷ್ಟಿತ್ತು. ಈಗ ಅದು ४೦ ಡಿಗ್ರಿಯಷ್ಟು ಏರಿಕೆಯಾಗಿದೆ. ಪ್ರತಿವರ್ಷ ಉಷ್ಣತೆಯು ಪ್ರಮಾಣ ಹೆಚ್ಚಾಗುತ್ತಲೆ ಇದೆ. ಜೊತೆಗೆ ವಾಯುಮಾಲಿನ್ಯವು ಗಣನೀಯವಾಗಿ ಹೆಚ್ಚಾಗುತ್ತಿದೆ. ಕೇಳರಿಯದ ಎಬೋಲ ಮತ್ತು ಝಿಖ ಎಂಬ ಕಾಯಿಲೆಗಳು ಮನುಷ್ಯನನ್ನು ಆವರಿಸಿಕೊಳ್ಳುತ್ತಿವೆ. ಈ ಕಾಯಿಲೆಗಳು ಮಾರಣಾಂತಿಕವಾಗಿವೆ. ಪ್ರಕೃತಿ ವಿನಾಶ ಅತಿಯಾದ

ಬರಗಾಲದಿಂದ ಇಲ್ಲವೆ, ಅತಿಯಾದ ಮಳೆಯಿಂದಲೂ ಉಂಟಾಗುತ್ತಲೆ ಇದೆ. ಇವು ಇಂಗ್ಲೇಂಡ, ಅಮೇರಿಕಾ, ಚೇನಾ ಮತ್ತು ಜಪಾನನಂತಹ ಮುಂದುವರೆದ ದೇಶಗಳನ್ನೂ ಬಿಟ್ಟಿಲ್ಲ. ಬಹು ಇತ್ತೀಚಿಗೆ ಅಮೇರಿಕಾದ ವರ್ಜಿಯಾ ರಾಜ್ಯದ ಕೆಲವು ಕಡೆ ಭಾರಿ ಮಳೆಯಾಗಿ ಪ್ರವಾಹ ಉಂಟಾಯಿತು. ಪ್ರವಾಹದಿಂದಾಗಿ ೨೩ ಜನರು ಮೃತಪಟ್ಟರು ಮತ್ತು ೬೬ ಸಾವಿರಕ್ಕೂ ಹೆಚ್ಚು ಜನರು ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಸಿಕ್ಕಿಕೊಂಡರು. ಸಾವಿರಾರು ಜನರು ತಮ್ಮ ಮನೆಗಳ ಛಾವಣಿಗಳ ಮೇಲೆ ಕುಳಿತು ರಕ್ಷಣೆ ಪಡೆದರು. ಹಲವಾರು ಸೇತುವೆಗಳು ಮತ್ತು ಕಟ್ಟಡಗಳು ಪ್ರವಾಹದಲ್ಲಿ ಕೊಚ್ಚಿಹೋದವು. ಒಂದೇರಡು ವರ್ಷಗಳ ಹಿಂದೆ ಭಾರತ ಸುನಾಮಿಯೆಂಬ ಬಿರುಗಾಳಿಯ ಕಾರಣವಾಗಿ ಸಮುದ್ರವೇ ಅಲ್ಲೋಲಕಲ್ಲೋಲವಾಗಿ ಸಾವಿರಾರು ಜನರನ್ನು ಬಲಿತೆಗೆದುಕೊಂಡಿತ್ತು. ಈ ವರ್ಷವೇ ಒಂದೇ ದಿನ ಸಿಡಿಲಿನ ಹೋಡೆತಕ್ಕೆ ಉತ್ತರ ಭಾರತದ ವಿವಿಧ ರಾಜ್ಯಗಳಲ್ಲಿ ೧೧೪ ಜನ ಸತ್ತಿದ್ದಾರೆ. ಈ ಮೊದಲು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಸಿಡಿಲಿನ ಹೊಡೆತದಿಂದ ಜನರು ಸತ್ತಿದ್ದ ಘಟನೆ ಇರಲ್ಲಿಲ್ಲ. ಈಗ ಅಂಥ ದುರಂತಗಳು ಏಕಾಗುತ್ತಿವೆ?ಆಕಾಶದಲ್ಲಿ ಮಾನವ ಹಾರಿಬಿಟ್ಟಿರುವ ಅಸಂಖ್ಯಾತ ಮತ್ತು ಅತ್ಯಂತ ವೇಗದಲ್ಲಿ ಗಿರಕಿ ಹೊಡೆಯುತ್ತಿರುವ ಉಪಗ್ರಹಗಳ ಢಿಕ್ಕಿಯ ಪರಿಣಾಮವೇ? ಇತ್ತೀಚಿಗೆ ಬಂದ ಸುದ್ದಿಯಂತೆ ಚೇನಾದ ಜಿಯಾಂಗ್ಸು ಪ್ರಾಂತ್ಯದಲ್ಲಿ ಭಯಾನಕವಾದ ಸುಂಟರಗಾಳಿಯೊಂದಿಗೆ ಭಾರಿ ಮಳೆ ಸುರಿದು ೯೮ ಜನರು ಮೃತಪಟ್ಟಿದ್ದಾರೆ. ಸುಮಾರು ೮೦೦ ಜನರು ಗಾಯಗೊಂಡಿದ್ದಾರೆ. ಸುಮಾರು ೪.೬ ಲಕ್ಷ ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಕಳುಹಿಸಬೇಕಾಯಿತು. ಇನ್ನೂ ೩.೨ ಲಕ್ಷ ಜನರು ಮಳೆಯ ಪ್ರದೇಶದಲ್ಲಿ ಸಿಲುಕಿದ್ಧಾರೆ. ಸುಂಟರಗಾಳಿ ಪ್ರತಿ ಗಂಟೆಗೆ ೧೨೫ ಕೀ.ಮಿ ವೇಗದಲ್ಲಿ ಬೀಸಿತು. ಅನೇಕ ಹಳ್ಳಿಗಳೇ ನೆಲಸಮವಾದವು. ಜೊತೆಗೆ ಅಲ್ಲಿಯ ನದಿಗಳಲ್ಲಿ ನೀರಿನ ಏರಿಕೆ ಹೆಚ್ಚಾಗಿ ಅನೇಕ ಪ್ರದೇಶಗಳು ಮುಳುಗಡೆಗೊಂಡು ಮನುಷ್ಯರಿಗೂ, ಪ್ರಾಣಿಗಳಿಗೂ ಜೀವಕ್ಕೆ ಅಪಾಯ ಒದಗಿತು. ಈ ರೀತಿ ಪರಿಸರ ನಾಶದಿಂದ ಜೀವಸಂಕುಲದ ಜೀವಂತ ಮರಣಕ್ಕೆ ಕಾರಣವಾಗುತ್ತಿದ್ದರೆ ಮನುಷ್ಯ ಸ್ವತಃ ತನ್ನ ಕೈಯಾರೆ ತಾನೇ ಮರಣಶಾಸನ ಬರೆದುಕೊಳ್ಳುತ್ತಿದ್ದಾನೆ. ಹಸಿರುಕ್ರಾಂತಿಯ ಬೆನ್ನುಹತ್ತಿ ಮನುಷ್ಯರು ವಿಷಭರಿತ ಆಹಾರವನ್ನು ಊಟಮಾಡುತ್ತಿದ್ದಾರೆ. ಅತಿಯಾದ ರಾಸಾಯನಿಕ ಗೊಬ್ಬರಗಳ ಉಪಯೋಗ ಮತ್ತು ಕ್ರಿಮಿನಾಶಕಗಳ ಉಪಯೋಗದ ಕಾರಣದಿಂದಾಗಿ ಇಂಥ ಪರಿಸ್ಥಿತಿ ಉಂಟಾಗಿದೆ. ಇದರ ಜೊತೆಗೆ ಜೀವತಂತ್ರಜ್ಞಾನದ ಮೂಲಕ ಸೃಷ್ಟಿಸಿದ ಬೀಜಗಳ ಉಪಯೋಗವು ಕೂಡ

ಇದಕ್ಕೆ ಕಾರಣವಾಗುತ್ತಿದೆ. ಇನ್ನು ಆಕಾಶದಲ್ಲಿ ಉಪಗ್ರಹಗಳ ಸಂಖ್ಯೆ ಅತಿಯಾಗಿದೆ. ತುಂಬ ಇತ್ತೀಚಿಗೆ ಇಸ್ರೊ ೨೬ ನಿಮಿಷದಲ್ಲಿ ೨೦ ಉಪಗ್ರಹಗಳನ್ನು ಆಕಾಶಕ್ಕೆ ಸೇರಿಸಿದೆ. ಆಕಾದಲ್ಲಿಯ ಉಪಗ್ರಹಗಳ ಸಂಖ್ಯೆ ಅತಿಯಾಗಿರುವ ಕಾರಣಕ್ಕಾಗಿ ಭೂಮಿಯ ಮೇಲೆ ಹವಾಮಾನ ಬದಲಾವಣೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಇಸ್ರೊ ಏನೂ ತಿಳಿಸದೆ ಇರುವದು ಮಾನವಕುಲ ಮತ್ತು ಪ್ರಾಣಿಕುಲಕ್ಕೆ ದೊಡ್ಡ ಅನ್ಯಾಯ ಮತ್ತು ಮೋಸ ಮಾಡಿದಂತೆ ಹಾಗು ವಿಜ್ಞಾನಿಗಳ ಮೌನ ದುರಾದೃಷ್ಟಕರ. ಇಂಥ ವಿವಿಧ ಪ್ರಕಾರದ ಪರಿಸರ ಸಂಬಂಧಿಸಿದ ಸಮಸ್ಯೆಗಳಲ್ಲದೆ ಜಗತ್ತಿನ ಎಲ್ಲ ದೇಶಗಳಲ್ಲಿ ಸಂಗ್ರಹವಾಗುತ್ತಿರುವ ಶಸ್ತ್ರಾಸ್ತ್ರಗಳು, ಅಣುಬಾಂಬುಗಳು ಮುಂತಾದವುಗಳ ಭಯವಂತೂ ಸದಾಕಾಲ ಜೀವಸಂಕುಲವನ್ನು ಕಾಡುತ್ತಿದೆ. ಉದಾಹರಣೆಗೆ ಭಾರತ ೧೪೫ ಹೊವಿಟ್ಜರ್ ಫಿರಂಗಿಗಳನ್ನು ೫ ಸಾವಿರ ಕೋಟಿರೂ ತೆತ್ತು ಅಮೇರಿಕಾದಿಂದ ಖರೀದಿ ಮಾಡಲು ಹೊರಟಿದೆ. ಇದಲ್ಲದೆ ೨೮ ಸಾವಿರ ಕೋಟಿ ಮೌಲ್ಯದ ೧೮ ಬಗೆಯ ಯುದ್ಧ ಸಾಮಾಗ್ರಿಗಳ ಬಗ್ಗೆ ಚರ್ಚೆ ನಡೆಸಿತು. ಈ ಹೊರಿಟ್ಜರ್ ಫಿರಂಗಿ ೨೫ ಕಿ,ಮೀ. ದೂರದವರೆಗೆ ಗುಂಡು ಹಾರಿಸುವ ಸಾಮರ್ಥ್ಯ ಹೊಂದಿವೆ. ದೇಶ ದೇಶಗಳ ಮಧ್ಯದಲ್ಲಿಯ ಅತಿಯಾದ ರಾಜಕೀಯ ಭೀನ್ನಾಭಿಪ್ರಾಯಗಳ ಕಾರಣದಿಂದ ಯಾವ ಸಮಯದಲ್ಲಾದರೂ ಮೂರನೆ ಮಹಾಯುದ್ಧ ಸಂಭವಿಸಬಹುದು. ಆಗ ಮನುಷ್ಯ ಸಂಗ್ರಹಿಸಿರುವ ಶಸ್ತ್ರಾಸ್ತ್ರಗಳ ಉಪಯೋಗದ ಭೀಕರ ಪರಿಣಾಮದಿಂದ ಅವನು ಸಜೀವವಾಗಿ ನಾಶವಾಗುತ್ತಾನೆ. ಸಮಸ್ತ ಜೀವಕುಲದ ಸಜೀವ ದಹನವಾಗುದರಲ್ಲಿ ಸಂದೇಹವಿಲ್ಲ. ಪರಿಸರ ವಿನಾಶವನ್ನು ತಪ್ಪಿಸಬೇಕು ಮತ್ತು ಅದನ್ನು ಉಳಿಸಬೇಕು ಹಾಗೂ ಕಾಪಾಡಬೇಕು ಎಂಬ ಸದ್ಬುದ್ಧಿ ಮಾನವನಿಗೆ ಬರಲಿ ಮತ್ತು ಪರಿಸರ ಉಳಿಸುವ ಕಾಳಜಿ ದೈನಂದಿನ ಜೀವನದ ಅವಿಭಾಜ್ಯಕಾರ್ಯಕ್ರಮ ಎಂಬ ತಿಳುವಳಿಕೆ ಬರಲಿ ಎಂದು ಎಲ್ಲರೂ ಹಾರೈಸೋಣ.

(ಕಳೆದ ಸಂಚಿಕೆಯಿಂದ ಮುಂದುವರೆದಿದೆ)

ಸ್ವಧರ್ಮ ಹಿರಿದೂ ಅಲ್ಲ ಕಿರಿದೂ ಅಲ್ಲ

ಅನು: ಸಿದ್ದವನಹಳ್ಳಿ ಕೃಷ್ಣಶರ್ಮ —ವಿನೋಬಾ

ಅಹಿಂಸೆಯಷ್ಟೇ ಅಲ್ಲ, ಸನ್ಯಾಸದ ಶಬ್ದಜಾಲವನ್ನೂ ಅರ್ಜುನ ಬಳಸತೊಡಗಿದ್ದ. ಈ ನೆತ್ತರು ಬಳಿದ ಕ್ಷಾತ್ರಕ್ಕಿಂತ ಸನ್ಯಾಸವೇ ಲೇಸು ಎಂದ ಅರ್ಜುನ. ಆದರೆ ಅದು ಅರ್ಜುನನ ಸ್ವಧರ್ಮವವೇ? ಅದು ಅವನ ವೃತ್ತಿಯೇ? ಸನ್ಯಾಸಿಯ ವೇಷವನ್ನೇನೊ ಸುಭವಾಗಿ ಧರಿಸಬಹುದು. ಆದರೆ ಸನ್ಯಾಸಿಯ ಮನಸ್ಸು ಎಲ್ಲಿಂದ ಬರಬೇಕು? ಸನ್ಯಾಸಿ ವೇಷದಿಂದ ಅರ್ಜುನ ಅಡವಿ ಸೇರಿದರೂ ಅಲ್ಲಿ ಜಿಂಕೆಯ ಬೇಟೆಯಾಡುತ್ತಿದ್ದ. ಭಗವಂತ ಸ್ಪಷ್ಟವಾಗಿಯೆ ಹೇಳಿದ: "ಅರ್ಜುನ ಯುದ್ಧ ಬೇಡವೆನ್ನುತ್ತೀಯ, ಇದು ಬರಿಯ ಬ್ರಾಂತಿ. ಇಂದಿನವರೆಗೆ ನಿನಗೆ ಮೈಗೂಡಿರುವ ಸ್ವಭಾವ ನಿನ್ನಿಂದ ಯುದ್ಧ ಮಾಡಿಸದೆ ಬಿಟ್ಟೀತೆ?"

ಅರ್ಜುನನಿಗೆ ಸ್ವಧರ್ಮ ವಿಗುಣವಾಗಿ ಕಂಡಿತು. ಆದರೇನು? ಅದು ಎಷ್ಟೇ ವಿಗುಣವಾದರೂ ಸ್ವಧರ್ಮದಿಂದಲೇ ಮನುಷ್ಯ ತನ್ನ ವಿಕಾಸವನ್ನು ಸಾಧಿಸಬೇಕು. ಅದ್ದರಿಂದಲೇ ಅವನಿಗೆ ವಿಕಾಸ ಸಾಧ್ಯ. ಇದರಲ್ಲಿ ಅಭಿಮಾನದ ಸೋಂಕು ಇಲ್ಲ. ಇದು ವಿಕಾಸದ ಸೂತ್ರ. ಹಿರಿದೆಂದು ಸ್ವಧರ್ಮವನ್ನು ಹಿಡಿಯಬೇಕಾಗಿಲ್ಲ; ಕಿರಿಯದೆಂದು ಜರಿಯಬೇಕಾಗಿಲ್ಲ. ನಿಜವಾಗಿ ಅದು ಹಿರಿದೂ ಅಲ್ಲ, ಕಿರಿದೂ ಅಲ್ಲ. ಅದು ನನಗೆ ಒಗ್ಗುವಂಥದ್ದು. "ಶ್ರೇಯಾನ್ ಸ್ವಧರ್ಮೋ ವಿಗುಣಃ:" ಗೀತೆಯ ಈ ಶ್ಲೋಕದಲ್ಲಿ ಬರುವ ಧರ್ಮ ಶಬ್ದದ ಅರ್ಥ ಹಿಂದೂ ಧರ್ಮ, ಮುಸಲ್ಮಾನ್ ಧರ್ಮ, ಕ್ರಿಸ್ತಾನ್ ಧರ್ಮ, ಹೀಗಲ್ಲ. ಪ್ರತಿಯೊಬ್ಬನಿಗೂ ಅವನವನ ಧರ್ಮ ಬೇರೆಬೇರೆಯಾಗಿ ಇದೆ. ನನ್ನಿದಿರಿಗಿರುವ ೨೦೦ ಜನರಿಗೆ ೨೦೦ಧರ್ಮ ಇವೆ. ನನ್ನ ಧರ್ಮವೇ ಹತ್ತು ವರ್ಷದ ಹಿಂದೆಇದ್ದದ್ದು ಈಗಿಲ್ಲ. ಈಗಿನದು ಹತ್ತು ವರ್ಷದೆ ತರುವಾಯ ಇರಲಿಕ್ಕಿಲ್ಲ. ಚಿಂತನೆ ಅನುಭವಗಳಿಂದ ಧರ್ಮ ಬದಲಾಗುತ್ತದೆ; ಹಳತು ಕಳೆದು ಹೊಸತು ಬರುತ್ತದೆ. ಹಠದಿಂದ ಏನೂ ಮಾಡಬೇಕಾದುದಿಲ್ಲ. ಹೆರವರ ಧರ್ಮ ಶ್ರೇಷ್ಠವೇ ಆಗಿ ಕಂಡರೂ ಅದನ್ನು ಅವಲಂಬಿಸಿದರೆ ನನಗೆ ಕಲ್ಯಾಣವಿಲ್ಲ.

ಸೂರ್ಯನ ಬೆಳಕು ನನಗೆ ಪ್ರಿಯ. ಆ ಪ್ರಕಾಶದಿಂದ ನಾನು ಬೆಳಗುತ್ತೇನೆ. ಸೂರ್ಯನು ನನಗೆ ವಂದನೀಯ. ಆದರೆ ನಾನು ನೆಲವನ್ನು ಬಿಟ್ಟು ಸೂರ್ಯನ ಬಳಿಗೆ ಹೋದರೆ ಸುಟ್ಟು ಬೂದಿಯಾದೇನು ಭೂಮಿಯ ಮೇಲೆ ಇರುವುದು

ವಿಗುಣವೆ ಇದ್ದೀತು. ಸೂರ್ಯನ ಮುಂದೆ ಭೂಮಿ ತುಚ್ಛವೇ ಇದ್ದೀತು; ಅದಕ್ಕೆ ಸ್ವಯಂಪ್ರಕಾಶವಿಲ್ಲ; ಆದರೆ ಸೂರ್ಯನ ಬಳಿಸಾರಿ ಆ ಬಿಸಿಯನ್ನು ತಡೆಯುವ ಬಲ ನನಗೆ ಇಲ್ಲದಿರುವ ತನಕ ಭೂಮಿಯ ಮೇಲೆ ಇದ್ದು ನನ್ನ ವಿಕಾಸ ಮಾಡಿಕೊಳ್ಳಬೇಕು. "ನೀರಿಗಿಂತ ಹಾಲು ಅಮೂಲ್ಯ, ಹಾಲಿನಲ್ಲಿ ಇರು" ಎಂದು ಮೀನಿಗೆ ಯಾರಾದರೂ ಹೇಳಿದರೆ ಮೀನು ಅದನ್ನು ಒಪ್ಪೀತೆ? ಮೀನು ನೀರಿನಲ್ಲಿ ಬದುಕೀತು, ಹಾಲಿನಲ್ಲಿ ಸತ್ತೀತು.

ಹೆರವರ ಧರ್ಮ ಸುಲಭವೆನಿಸಿದರೂ ಸಂಗ್ರಾಹ್ಯವಲ್ಲ. ಅನೇಕ ಸಲ ಸುಲಭವೆಂದು ಕಾಂಬುದು ಬರಿಯ ತೋರಿಕೆ. ಸಂಸಾರದಲ್ಲಿ ಹೆಂಡತಿ ಮಕ್ಕಳ ಪೋಷಣೆ ಮಾಡುವ ತಾಪತ್ರಯ ಕಷ್ಟವಾದುದೆಂದು ಗೃಹಸ್ಥರು ಸನ್ಯಾಸತೆಗೆದುಕೊಂಡರೆ ಅದು ಬರೀ ವೇಷ: ಅದು ಭಾರವಾದೀತು. ಅವಕಾಶ ಸಿಕ್ಕರೆ ಸಾಕು ಸಂಸಾರದ ವಾಸನೆ ಉಕ್ಕುತ್ತದೆ. ಸಂಸಾರದ ಹೊರೆ ಬಾರವೆಂದು ಅಡವಿಗೆ ಹೋದವನು ಅಲ್ಲಿಯೂ ಒಂದು ಗುಡಿಸಲು ಕಟ್ಟುತ್ತಾನೆ. ಅದರ ರಕ್ಷಣೆಗಾಗಿ ಒಂದು ಬೇಲಿ ಹಾಕುತ್ತಾನೆ. ಹೀಗೆ ಮಾಡುಮಾಡುತ್ತ ಸಂಸಾರದ ಎಲ್ಲ ಕೀಟಲೆಯೂ ಅವನ ಪಾಲಿಗೆ ಬರುತ್ತದೆ. ನಿಜವಾದ ವೈರಾಗ್ಯವೃತ್ತಿಯಿದ್ದವರಿಗೆ ಸನ್ಯಾಸ ಕಠಿನವಲ್ಲ. ಸುಲಭವಾದುದು ಎಂದು ಸ್ಮೃತಿವಚನವೇ ಇದೆ. ಮುಖ್ಯವಾದ ಅಂಶ ವೃತ್ತಿ. ಅವನವನ ನೈಜವೃತ್ತಿಯಂತೆ ಅವನವನ ಧರ್ಮ. ಶ್ರೇಷ್ಠ ಕನಿಷ್ಠ, ಸುಲಭ – ಕಷ್ಟ ಅದರಲ್ಲಿಲ್ಲ. ನಿಜವಾದ ವಿಕಾಸವಾಗಬೇಕು, ಸತ್ಯವಾದ ಪರಿಣತಿಯಾಗಬೇಕು.

ಕೆಲವರು ಭಾವುಕರು ಕೇಳಿಯಾರು–"ಯುದ್ಧಕ್ಕಿಂತಲೂ ಸನ್ಯಾಸ ಹೆಚ್ಚಿನದಾಗಿದ್ದರೆ ಭಗವಂತ ಅರ್ಜುನನ್ನು ಸನ್ಯಾಸಿಯಾಗಿ ಏಕೆ ಮಾಡಲಿಲ್ಲ? ಭಗವಂತನಿಗೆ ಯಾವುದೂ ಅಸಾಧ್ಯವಿರಲಿಲ್ಲ. ಆದರೆ ಅದರಲ್ಲಿ ಅರ್ಜುನನಿಗೇನು ಪುರುಷಾರ್ಥಸಿದ್ಧಿ? ಭಗವಂತ ಎಂದರೆ ಸ್ವಾತಂತ್ರ್ಯ. ಪ್ರತಿಯೊಬ್ಬನೂ ತಾನೆ ಪ್ರಯತ್ನಿಸಬೇಕು. ಅದೇ ಸವಿ. ಚಿಕ್ಕ ಮಕ್ಕಳಿಗೆ ತಾವೇ ಚಿತ್ರ ಗೀಚುವುದೆಂದರೆ ಆನಂದ. ಅವನ ಕೈಹಿಡಿದು ತಿದ್ದಿಸಿದರೆ ಅವನಿಗದು ಸೇರದು. ಉಪಾಧ್ಯಾಯನೇ ಹುಡುಗನಿಗೆ ಲೆಕ್ಕ ಮಾಡಿಕೊಟ್ಟರೆ ಹುಡುಗನ ಬುದ್ಧಿ ಬೆಳೆಯುವುದು ಹೇಗೆ? ತಂದೆ, ತಾಯಿ, ಗುರುಗಳು ಸೂಚನೆ ಕೊಡಲಿ. ಪರಮೇಶ್ವರ ಒಳಗಿನಿಂದಲೇ ಸೂಚನೆ ಕೊಡುತ್ತಾನೆ. ಇದಕ್ಕಿಂತ ಹೆಚ್ಚು ಏನೂ ಬೇಡ. ಕುಂಬಾರನಂತೆ ದೇವರೇ ಕುಟ್ಟಿ ಬಡಿದು ಎಳೆದು ಪ್ರತಿಯೊಬ್ಬರನ್ನೂ ಮಡಿಕೆ ಮಾಡತೊಡಗಿದರೆ ಅದರಲ್ಲೇನು ಸ್ವಾರಸ್ಯ? ನಾವು ಗಡಿಗೆ, ಮಡಿಕೆಯಲ್ಲ; ನಾವು ಚಿನ್ಮಯರು.

ಇದೆಲ್ಲ ವಿವರಣೆಯಿಂದ ಒಂದು ಮಾತು ನಿಮಗೆ ಮನದಟ್ಟಾಗಿರಬೇಕು.

ಸ್ವಧರ್ಮಕ್ಕೆ ಅಡ್ಡಿಬರುವ ಮೋಹವನ್ನು ಕಳೆಯುವುದೇ ಗೀತೆಯ ಜನ್ಮದ ಉದ್ದೇಶ. ಅರ್ಜುನ ಧರ್ಮಸಮ್ಮೂಢನಾದ. ಸ್ವಧರ್ಮದ ಬಗ್ಗೆ ಅವನು ಮೋಹಪರವಶನಾದ. ಕೃಷ್ಣ ಕೊಟ್ಟ ಮೊದಲನೇ ಏಟಿಗೇ ಅರ್ಜುನ ಈ ಮಾತನ್ನು ಒಪ್ಪಿಕೊಂಡ. ಆ ಮೋಹ, ಮಮತೆ, ಆಸಕ್ತಿಯನ್ನು ದೂರ ಮಾಡುವುದೇ ಗೀತೆಯ ಮುಖ್ಯ ಕಾರ್ಯ. ಗೀತೆಯನ್ನೆಲ್ಲ ಹೇಳಿದ ಮೇಲೆ ಕೃಷ್ಣ ಕೇಳುವ ಪ್ರಶ್ನೆಯೇನು? "ಅರ್ಜುನ, ಮೋಹ ಹೋಯಿತೆ?" ಅರ್ಜುನ ಹೇಳಿದ – 'ದೇವ, ಮೋಹ ನಾಶವಾಯಿತು. ಸ್ವಧರ್ಮದ ಅರಿವಾಯಿತು. ಹೀಗೆ ಗೀತೆಯ ಉಪಕ್ರಮ ಮತ್ತು ಉಪಸಂಹಾರ ಜೋಡಿಸಿ ನೋಡಿದಲ್ಲಿ ಮೋಹ ನಿರಾಕರಣೆಯೇ ಅದರ ಫಲ ಎಂದು ತಿಳಿದೀತು. ಗೀತೆಯದೇ ಅಲ್ಲ, ಮಹಾಭಾರತದ್ದೂ ಇದೇ ಉದ್ದೇಶ. ವ್ಯಾಸರು ಭಾರತದ ಪ್ರಾರಂಭದಲ್ಲೇ ಹೇಳಿದ್ದರೆ –'ಲೋಗರ ಮನಸ್ಸಿನ ಮೋಹವನ್ನೂ ದೂರಮಾಡಲೆಂದೇ ನಾನೀ ಇತಿಹಾಸ ಪ್ರದೀಪವನ್ನು ಹತ್ತಿಸುತ್ತಿದ್ದೇನೆ.'

ಸಮಗ್ರ ಗೀತೆಯನ್ನು ಅರ್ಥಮಾಡಿಕೊಳ್ಳಲು ಅರ್ಜುನನ ಈ ಭೂಮಿಕೆ ನಮಗೆ ಉಪಕಾರವಾಗಿದೆ. ಇದಕ್ಕಾಗಿ ನಾವು ಅವನಿಗೆ ಕೃತಜ್ಞರಾಗಿರಬೇಕು. ಇದಲ್ಲದೆ ಇನ್ನೂ ಇದೆ ಅವನ ಉಪಕಾರ. ಅರ್ಜುನನ ಈ ಮನೋವೃತ್ತಿಯಲ್ಲಿ ಅತ್ಯಂತ ಋಜುತೆ ಕಾಣಬರುತ್ತದೆ. 'ಅರ್ಜುನ ಎಂದರೇನೇ ಋಜು ಅಥವಾ ಸರಳಸ್ವಭಾವಿ. ಅವನ ಮನಸ್ಸಿನಲ್ಲಿ ಹುಟ್ಟಿದ ವಿಚಾರ ಎಲ್ಲವನ್ನೂ ಬಿಚ್ಚುಮನದಿಂದ ಅವನು ಕೃಷ್ಣನ ಇದಿರಿಗೆ ಹೇಳಿದ. ಏನನ್ನೂಮುಚ್ಚಿಡಲಿಲ್ಲ. ಕಡೆಗೆ ಶ್ರೀಕೃಷ್ಣನನ್ನು ಶರಣು ಹೋದ. ಅರ್ಜುನ ಮೊದಲೇ ಕೃಷ್ಣ ಶರಣ, ಕೃಷ್ಣನನ್ನು ಸಾರಥಿಯಾಗಿ ಮಾಡಿಕೊಂಡು ತನ್ನ ಕುದುರೆಗಳ ಲಗಾಮನ್ನೂ ಅವನ ಕೈಗೆ ಕೊಟ್ಟಾಗಲೇ ತನ್ನ ಮನಸ್ಸಿಗೆ ಲಗಾಮನ್ನೂ ಅವನ ಕೈಗೆ ಕೊಡಲು ಸಿದ್ಧನಾದ. ನಾವೂ ಹಾಗೇ ಮಾಡೋಣ. 'ಅರ್ಜುನನ ಬಳಿ ಕೃಷ್ಣ ಇದ್ದ. ನಾವೆಲ್ಲಿ ತರೋಣ ಕೃಷ್ಣನನ್ನು, ಎಂದು ನೀವು ಹೇಳದಿರಿ. ಕೃಷ್ಣ ಎಂಬ ವ್ಯಕ್ತಿಯೊಬ್ಬ ಇದ್ದ ಎಂಬ ಐತಿಹಾಸಿಕ ಭ್ರಾಂತಿಗೆ ಸಿಗಬೇಡಿ. ಅಂತರ್ಯಾಮಿಯ ರೂಪದಿಂದ ಕೃಷ್ಣ ಪ್ರತಿಯೊಬ್ಬರ ಹೃದಯದಲ್ಲೂ ವಿರಾಜಮಾನನಾಗಿದ್ದಾನೆ. ಸಮೀಪಾತಿಸಮೀಪ ಎಂದರೆ ಅವನೇ. ನಮ್ಮ ಹೃದಯದ ಎಲ್ಲ ಕಳವಳವನ್ನು ಅವನಿದಿರಿಗೆ ತೆರೆದಿಟ್ಟು 'ದೇವ, ನಾ ನಿನಗೆ ಶರಣುಬಂದೆ. ನೀನು ನನಗೆ ಅನನ್ಯ ಗುರು. ನನಗೆ ದಾರಿ ತೋರು.* ನೀ ತೋರಿದ ದಾರಿಯಲ್ಲಿ ನಾ ನಡೆವೆ' ಎನ್ನೋಣ. ಹೀಗೆ ನಡೆದರೆ ಆ ಪಾರ್ಥಸಾರಥಿ ನಮ್ಮ ಸಾರಥ್ಯವನ್ನು ಮಾಡಿಯಾನು. ನಮಗೆ ಗೆಲುವು ಕೊಟ್ಟಾನು. (ಮುಂದುವರೆಯುತ್ತದೆ)

ಗೋಪಾಲಕೃಷ್ಣ ಗೋಖಲೆಯವರನ್ನು ನೆನೆದು..

– ಸುರೇಂದ್ರ ಕೌಲಗಿ

(ಭಾರತದ ಸ್ವಾತಂತ್ರ್ಯಪೂರ್ವದಲ್ಲಿ ದೇಶದ ಘನತೆ ಹೆಚ್ಚಿಸಲು ಕಾರಣರಾಗಿದ್ದ ಡಾ॥ಗೋಪಾಲ ಕೃಷ್ಣ ಗೋಕಲೆಯವರ ೧೫೦ನೇ ವರ್ಷದ ದಿನಾಚರಣೆ ಇದಾಗಿದೆ–ಸಂ)

ಗೋಖಲೆಯವರು ಗಾಂಧೀಜಿಯವರ ರಾಜಕೀಯ ಗುರುವಾಗಿದ್ದರು ವಿಶೇಷವೇನೆಂದರೆ ಗಾಂಧೀಜಿಯುವರೇ ಸ್ವಯಂ ಪ್ರೇರಣೆಯಿಂದ ಗೋಖಲೆಯವರನ್ನು ತಮ್ಮ ರಾಜಕೀಯ ಗುರುವನ್ನಾಗಿ ಸ್ವೀಕರಿಸಿದ್ದರು. ದಕ್ಷಿಣ ಆಫ್ರಿಕಾದಲ್ಲಿ ಅಲ್ಲಿಯ ಭಾರತೀಯರು ಮತ್ತು ಮೂಲ ನಿವಾಸಿಗಳು ಅನುಭವಿಸುತ್ತಿದ್ದ ವರ್ಣಭೇದ ನೀತಿ ಮತ್ತು ರಾಜಕೀಯ ಹಾಗೂ ಆರ್ಥಿಕ ದಿಗ್ಬಂಧನೆಗಳ ವಿರುದ್ಧ ತಾವು ನಡೆಸುತ್ತಿದ್ದ ಹೋರಾಟಕ್ಕೆ ನೈತಿಕ ಬೆಂಬಲಪಡೆಯುವುದಕ್ಕಾಗಿ ಗೋಖಲೆಯವರನ್ನು ದಕ್ಷಿಣ ಆಫ್ರಿಕಾಕ್ಕೆ ಗಾಂಧೀಜಿ ಬರಮಾಡಿಕೊಂಡಿದ್ದರು. ಆಗ ಅಲ್ಲಿ ಗೋಖಲೆಯವರು ಗಾಂಧೀಜಿ ನಡೆಸುತ್ತಿದ್ದ ಹೋರಾಟದ ಬಗೆಯನ್ನು ಪ್ರತ್ಯಕ್ಷವಾಗಿ ನೋಡಿದರು. ಗಾಂಧೀಜಿಯವರಲ್ಲಿದ್ದ ಸಂಘಟನಾ ಚಾತುರ್ಯವನ್ನೂ ನೋಡಿದರು. ಇದೆಲ್ಲಕ್ಕಿಂತ ಮಿಗಿಲಾಗಿ ಗಾಂಧೀಜಿಯವರು ತಮ್ಮ ಅನುಯಾಯಿಗಳ ಮೇಲೆ ಬೀರಿದ್ದ ನೈತಿಕ ಪ್ರಭಾವನ್ನು ಕೂಡ ಗೋಖಲೆ ಕಂಡುಕೊಂಡರು. ಗೋಖಲೆಯವರ ದಕ್ಷಿಣ ಆಫ್ರಿಕಾದ ಭೇಟಿಯ ಕಾರಣದಿಂದ ಅಲ್ಲಿಯ ಸರ್ವಾಧಿಕಾರಿ ಸ್ಮಟ್ಸ್ ಜೊತೆಗೆ ಭಾರತೀಯರ ವಿರುದ್ಧ ಇದ್ದ ಕರಾಳ ಶಾಸನಗಳನ್ನು ವಜಾ ಮಾಡುವ ಬಗ್ಗೆ ಸ್ವರಾಧಿಕಾರಿ ಸ್ಮಟ್ಸ ಜೊತೆಗೆ ಒಪ್ಪಂದವಾಯಿತು. ಆದ್ದರಿಂದ ಗೋಖಲೆಯವರು ಗಾಂಧೀಜಿಗೆ ಯಾವ ಸಬೂಬು ಹೇಳದೆ ಭಾರತಕ್ಕೆ ಹಿಂದಿರುಗಲು ಹೇಳಿದರು. ಆದರೆ ಗಾಂಧೀಜಿಯವರಿಗೆ ಮತ್ತು ಇತರ ಹೋರಾಟಗಾರರಿಗೆ ಸ್ಮಟ್ಸ್‌ನ ಮಾತುಗಳಲ್ಲಿ ವಿಶ್ವಾಸ ಇಲ್ಲದೆ ಇದುದರಿಂದ ಗಾಂಧೀಜಿ ತಕ್ಷಣ ಭಾರತಕ್ಕೆ ಹಿಂದಿರುಗಲಿಲ್ಲ. ಅವರೆಲ್ಲರೂ ಅಂದುಕೊಂಡಿದ್ದಂತೆ ಸ್ಮಟ್ಸ್ ತನ್ನ ಮಾತಿಗೆ ವಿರೋಧವಾಗಿ ನಡೆದುಕೊಂಡ.

ಗೋಖಲೆಯವರು ಭಾರತಕ್ಕೆ ಹಿಂದುರುಗಿದ ೧೯೧೨ರ ಡಿಸೆಂಬರನಲ್ಲಿ

ಮುಂಬೈ ನಗರದ ಟೌನಹಾಲ್‌ನಲ್ಲಿ ನಡೆದ ಸಭೆಯಲ್ಲಿ ಗಾಂಧೀಯವರ ಬಗ್ಗೆ ಗೋಖಲೆ ಈ ರೀತಿ ನುಡಿದರು:-

"ಗಾಂಧೀಯವರಲ್ಲಿ ಅದ್ಭುತವಾದ ಆಧ್ಯಾತ್ಮಿಕ ಶಕ್ತಿ ಇದೆ. ತನ್ಮೂಲಕ ಅವರು ತಮ್ಮ ಸುತ್ತಲಿರುವ ಸಾಮಾನ್ಯ ಜನರನ್ನು ಕೂಡ ನಾಯಕರನ್ನಾಗಿಯೂ, ಹುತಾತ್ಮರನ್ನಾಗಿಯೂ ಮಾಡಬಲ್ಲವರಾಗಿದ್ದಾರೆ. ಗಾಂಧೀಯವರ ಉಪಸ್ಥಿತಿಯಲ್ಲಿ ಯಾರೇ ಆಗಲಿ ಸಲ್ಲದ ಕೆಲಸವನ್ನು ಮಾಡಲು ನಾಚಿಕೆಪಟ್ಟು ಕೊಳ್ಳುತ್ತಾರೆ. ಅಂದರೆ ಅಸಾಧು ವಾದುದನ್ನುಮಾಡಲು ಯೋಚಿಸುವುದಕ್ಕೂ ಭಯಪಡುತ್ತಿದ್ದಾರೆ."

೧೮೯೬ರಲ್ಲಿ ಗಾಂಧೀಜಿ ಭಾರತಕ್ಕೆ ಬಂದಿದ್ದಾಗ ಗೋಖಲೆಯವರನ್ನು ಪ್ರಥಮಬಾರಿಗೆ ಭೇಟಿ ಮಾಡಲು ಪೂನಾಕ್ಕೆ ಹೋಗಿದ್ದರು. ಆಗ ಗಾಂಧೀಯವರಿಗೆ ಗೋಖಲೆಯವರ ಬಗ್ಗೆ ಮೂಡಿದ ಭಾವನೆಯನ್ನು ಗಾಂಧೀಯವರು ತಮ್ಮ ಆತ್ಮಕಥೆಯಲ್ಲಿ ಹೀಗೆ ಬರೆದಿದ್ದಾರೆ: "ನಾನು ಗೋಖಲೆಯವರನ್ನು ಹೋಗಿ ನೋಡಿದೆ. ಅವರು ಫರ್ಗ್ಯುಸನ್ ಕಾಲೇಜಿನ ಆವರಣದಲ್ಲಿದ್ದರು. ಅವರು ನನ್ನನ್ನು ಪ್ರೇಮದಿಂದ ಸ್ವಾಗತಿಸಿದರು. ನನ್ನ ಹೃದಯ ಕೂಡಲೇ ಅವರಿಗೆ ಮಾರುಹೋಯಿತು. ಅವರೊಂದಿಗೆ ಅದೇ ನನ್ನ ಪ್ರಥಮ ಭೇಟಿಯಾಗಿತ್ತು. ಆದರೆ ನಮ್ಮ ಭೇಟಿ ಹಳೆಯ ಮಿತ್ರತ್ವದ ಪುನರುಜ್ಜೀವನವೋ ಎಂಬಂತೆ ತೋರಿತು. ಸರ್ ಫಿರೋಜ್ ಷಾ ನನಗೆ ಹಿಮಾಲಯದಂತೆ ಕಂಡರು. ಲೋಕಮಾನ್ಯರು ಸಾಗರದಂತೆ ಕಂಡಿದ್ದರು. ಆದರೆ ಗೋಖಲೆ ಗಂಗಾ ನದಿಯಂತಿದ್ದರು. ಆ ಪವಿತ್ರವಾದ ನದಿಯಲ್ಲಿ ಯಾರು ಬೇಕಾದರೂ ಚೈತನ್ಯದಾಯಕ ಸ್ನಾನ ಮಾಡಬಹುದಾಗಿತ್ತು. ಹಿಮಾಲಯವನ್ನು ಹತ್ತುವುದು ಸಾಧ್ಯವಿರಲಿಲ್ಲ, ಸಮುದ್ರದಲ್ಲಿ ಯಾನ ಮಾಡುವುದು ಸುಲಭವಲ್ಲ. ಆದರೆ ಗಂಗಾ ನದಿ ಎಲ್ಲರನ್ನೂ ತೊಡೆಯ ಮೇಲೆ ಆಡಲು, ಹೃದಯದಲ್ಲಿ ನಲಿದಾಡಲು ಆಹ್ವಾನಿಸುತ್ತಾಳೆ. ಗಂಗಾ ನದಿಯಲ್ಲಿ ಪುಟ್ಟ ನಾವೆಯಲ್ಲಿ ಹುಟ್ಟು ಹಾಕುತ್ತಾ ಹೋಗಬಹುದು. ಅದೇ ಒಂದು ಆನಂದ. ಉಪಾಧ್ಯಾಯನು ಶಾಲೆಗೆ ಸೇರಲು ಬಂದಿರುವ ವಿದ್ಯಾರ್ಥಿಯನ್ನು ಪರೀಕ್ಷಿಸುವಂತೆ ಗೋಖಲೆಯವರು ನನ್ನನ್ನು ಸೂಕ್ಷ್ಮವಗಿ ಪರೀಕ್ಷಿಸಿದರು. ನಾನು ಯಾರು ಯಾರನ್ನು ಭೇಟಿಬೇಕು, ಹೇಗೆ ನೋಡಬೇಕು ಎಂದೆಲ್ಲ ಅವರು ನನಗೆ ಹೇಳಿಕೊಟ್ಟರು. ನನ್ನ ಭಾಷಣವನ್ನು ಕೇಳಬಯಸಿದರು. ಕಾಲೇಜನ್ನು ತೋರಿಸಿದರು. "ಯಾವಾಗ ಬೇಕಾದರೂ ನನ್ನನ್ನು ಬಂದು ನೋಡಿ ಎಂದು ಹೇಳಿದರು. ಭಂಢಾರ್ಕರರನ್ನು ಸಂದರ್ಶಿಸಿದ ನಂತರ ಫಲಿತಾಂಶವನ್ನು ಬಂದು

ಹೇಳಿ" ಎಂದು ನನ್ನನ್ನು ಅತ್ಯಂತ ಸುಖಿಯನ್ನಾಗಿ ಮಾಡಿ ಬೀಳ್ಕೊಟ್ಟರು. ಗೋಖಲೆಯವರು, ಜೀವಿದ್ದಾಗಲೂ ಮತ್ತು ಈಗಲೂ, ರಾಜಕೀಯ ಕ್ಷೇತ್ರದಲ್ಲಿ ನನ್ನ ಹೃದಯದಲ್ಲಿ ಅವರು ಆಕ್ರಮಿಸಿದ ಸ್ಥಾನವನ್ನು ಮತ್ತಾರು ಆಕ್ರಮಿಸಲಿಲ್ಲ.

ಕರ್ನಾಟಕದ ಹಿರಿಯ ಚಿಂತಕರು ಮತ್ತು ಸರಸ್ವತಿ ಪುತ್ರರು ಆಗಿದ್ದ ಡಿ.ವಿ.ಗುಂಡಪ್ಪನವರು ಬೆಂಗಳೂರಿನಲ್ಲಿ ಗೋಖಲೆ ಸಾರ್ವಜನಿಕ ಸಂಸ್ಥೆಯನ್ನು ಸ್ಥಾಪಿಸಿ. ಆ ಸಂಸ್ಥೆಯಲ್ಲಿ ಗೋಖಲೆಯವರ ಚಿತ್ರವನ್ನು ಗಾಂಧೀಜಿಯವರ ಹಸ್ತವೇ ಅನಾವರಣಗೊಳಿಸಿದರು ಇದು ಐತಿಹಾಸಿಕ ಘಟನೆ. ಅದರಿಂದಾಗಿ ಕರ್ನಾಟಕ ಮತ್ತು ಗೋಖಲೆಯವರ ಸಂಬಂಧ ಹೆಚ್ಚು ನಿಕಟವಾಯಿತು. ಅದಕ್ಕಾಗಿ ಕನ್ನಡಿಗರು ಡಿ.ವಿ.ಜಿಯವರಿಗೆ ಕೃತಜ್ಞರಾಗಿರಬೇಕು. ಕೇವಲ ೪೯ ವರ್ಷ ಜೀವಿಸಿದ್ದ ಗೋಖಲೆರವರ ಜೀವನ ಕೊನೆಯವರೆಗೂ ಕ್ರೀಯಾತ್ಮಕವಾಗಿತ್ತು ಮತ್ತು ಭೋಧನಾತ್ಮಕವಾಗಿತ್ತು. ಅವರ ಜೀವನದ ಪ್ರಮುಖ ಘಟ್ಟಗಳನ್ನು ಈ ಕೆಳಗೆ ಕಾಣಿಸಲಾಗಿದೆ. ಅವರ ೧೫೦ನೇ ಜನ್ಮ ವರ್ಷವಾಗಿರುವ ವರ್ತಮಾನದಲ್ಲಿ ಗೋಪಾಲ ಕೃಷ್ಣ ಗೋಖಲೆಯವರ ಸಾಧನೆಯನ್ನು ದೇಶದ ನವಪಿಳಿಗೆಯ ಯುವಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಮಾಡಿಕೊಡುವುದು ಅಗತ್ಯವಾಗಿದೆ.

ತಿದ್ದುಪಡಿ

'ಜನಪದ ವಿಚಾರ' ದ ಜೂನ್ ಸಂಚಿಕೆಯ ನಾಲ್ಕೂ ನಿಟ್ಟಿನಿಂದ (ಪುಟ;೨೫)ಶೀರ್ಷಿಕೆಯಡಿ ಜಿ.ಎಸ್. ನಾಗಭೂಷಣ ಅವರ ಹೆಸರಿನಲ್ಲಿ ಪ್ರಕಟವಾಗಿರುವ ಮಾತು ಡಿ. ಎಸ್. ನಾಗಭೂಷಣ ಅವರದ್ದಾಗಿದ್ದು, ಆ ಮಾತುಗಳಲ್ಲಿ ಮೂರು-ನಾಲ್ಕು ಮುದ್ರಣದೋಷಗಳು ನುಸುಳಿದ್ದು, ಅವು ಅವರ ಮಾತುಗಳನ್ನು ವಿರೂಪಗೊಳಿಸಿದಂತಾಗಿದೆ. ಇದಕ್ಕೆ ಪತ್ರಿಕೆ ವಿಷಾದ ವ್ಯತಕ್ತಿಪಡಿಸುತ್ತಾ ಅವರ ಮೂಲ ಮಾತನ್ನುಇಲ್ಲಿ ಪ್ರಕಟಿಸಿದೆ.

'ಇಂದು ಅಂಬೇಡ್ಕರರು ಯಾವ ಉನ್ನತ ಮಾನವೀಯ ಮೌಲ್ಯಗಳಿಗಾಗಿ ಹೋರಾಟ ಮಾಡಿದರೋ-ಆ ಹೋರಾಟ ತನ್ನ ಕುದ್ರ್ಧತೆಯಿಂದಾಗಿ ಹಲವು ಬಾರಿ ದಾರಿ ತಪ್ಪಿದ್ದರೂ-ಆ ಮೌಲ್ಯಗಳನ್ನು ಪುನರ್‌ಸ್ಥಾಪಿಸಬಯಸುವವರು, ಅವರನ್ನು ಪುನರನ್ವೇಷಿಸಬೇಕಾಗಿರುವುದು ಅವರು ಗಾಂಧಿಯೊಂದಿಗೆ ನಡೆಸಿದ ವಾಗ್ವಾದದ ಪರಿಪ್ರೇಕ್ಷ್ಯದಲ್ಲೇ; ಆ ವಾಗ್ವಾದ ಏಕೆ ಮತ್ತು ಎಲ್ಲಿ ಹಳಿ ತಪ್ಪಿತು ಎಂಬುದರ ವಸ್ತುನಿಷ್ಠ ಪರಿಶೀಲನೆಯ ಮೂಲಕವೇ.'

-ಸಂಪಾದಕ

ಗೋಪಾಲ ಕೃಷ್ಣ ಗೋಖಲೆ: "ಜೀವನರೇಖೆಗಳು"

೧೮೬೬ ಮೇ ೯	ಜನನ: ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಚಿಪಲೂಣ ತಾಲೋಕಿನ ಕಟ್ಲುಕ್ ಗ್ರಾಮದಲ್ಲಿ. ತಂದೆ: ಕೃಷ್ಣರಾವ್, ತಾಯಿ: ಸತ್ಯಭಾಮಾಬಾಯಿ.
೧೮೭೬-೧೮೮೧	ಕೊಲ್ಹಾಪುರದಲ್ಲಿ ವ್ಯಾಸಂಗ; ಮೆಟ್ರಿಕ್ಯುಲೇಷನ್.
೧೮೮೨ರಿಂದ	ಮಹದೇವ ಗೋವಿಂದ ರಾನಡೆ ಸಂಪರ್ಕ.
೧೮೮೪	ಮುಂಬಯಿಯಲ್ಲಿ 'ಬಿ.ಎ.' ಉತ್ತೀರ್ಣ.
೧೮೮೫-೧೯೦೪	ಪುಣೆಯ ಡೆಕ್ಕನ್ ಎಜುಕೇಷನ್ ಸೊಸೈಟಿಫರ್ಗುಸನ್ ಕಾಲೇಜಿನಲ್ಲಿ ಅಧ್ಯಾಪಕ.
೧೮೮೮-೧೮೯೬	ಪುಣೆಯ 'ಸಾರ್ವಜನಿಕ ಸಭಾ' ಕಾರ್ಯದರ್ಶಿ.
೧೮೮೯ರಿಂದ	ಅಖಿಲ ಭಾರತ ಕಾಂಗ್ರೆಸ್ ಸಂಪರ್ಕ.
೧೮೯೫ರಿಂದ	ಕಾಂಗ್ರೆಸ್ (ಪುಣೆ) ಕಾರ್ಯದರ್ಶಿ.
೧೮೯೫-೧೯೧೫	ಮುಂಬಯಿ ವಿಶ್ವವಿದ್ಯಾಲಯ ಸೆನೇಟ್ ಸದಸ್ಯ
೧೮೯೭	ವೆಲ್ಬಿ ಕಮಿಶನ್ನಿಗೆ ಸಾಕ್ಷ್ಯ ನೀಡಲು ಲಂಡನ್ನಿಗೆ ಪ್ರವಾಸ.
೧೮೯೯ರಿಂದ	ಮುಂಬಯಿ ಪ್ರಾಂತ ಲೆಜಿಸ್ಲೆಟಿವ್ ಕೌನ್ಸಿಲ್ ಸದಸ್ಯ
೧೯೦೨-೧೯೧೫	ಇಂಪೀರಿಯಲ್ ಲೆಜಿಸ್ಲೆಟಿವ್ ಕೌನ್ಸಿಲ್ ಸದಸ್ಯ.
೧೯೦೪	ಬ್ರಿಟೀಷ್ ಸರ್ಕಾರದಿಂದ 'ಸಿ.ಐ.ಇ.'ಪ್ರಶಸ್ತಿ
೧೯೦೫ರಿಂದ	ಪುಣೆ ಮುನಿಸಿಪಾಲಿಟಿಯ ಅಧ್ಯಕ್ಷ.
೧೯೦೫ ಜೂ.೧೨	ಪುಣೆಯಲ್ಲಿ 'ಸರ್ವೆಂಟ್ಸ್ ಆಫ್ ಇಂಡಿಯ ಸೊಸೈಟಿ ಸ್ಥಾಪನೆ.
೧೯೦೫	ಭಾರತ ಪರ ಪ್ರಚಾರಕ್ಕಾಗಿ ಎರಡನೆ ಬಾರಿ ಲಂಡನ್ ಪ್ರವಾಸ.
೧೯೦೫ ಡಿ.	ಅಖಿಲ ಭಾರತ ಕಾಂಗ್ರೆಸ್ (ಕಾಶಿ) ಅಧಿವೇಶನದ ಅಧ್ಯಕ್ಷ.
೧೯೦೬-೧೯೦೮	ಅಖಿಲ ಭಾರತ ಕಾಂಗ್ರೆಸಿನ ಮುಖ್ಯ ಕಾರ್ಯದರ್ಶಿ.
೧೯೦೮-೯	ಮಾರ್ಲೇ-ಮಿಂಟೋ ಸುದಾರಣೆಗಳಿಗೆ ಸಂಬಂದಿಸಿ ಸರ್ಕಾರಕ್ಕೂ ಜನತೆಗೂ ನಡುವೆ ಮಾಧ್ಯಸ್ಥ್ಯ.
೧೯೧೧	ಕಡ್ಡಾಯ ಶಿಶುಶಿಕ್ಷಣ ಕಾನೂನಿಗಾಗಿ ಪ್ರಯತ್ನ.
೧೯೧೨-೧೯೧೫	ರಾಯಲ್ ಪಬ್ಲಿಕ್ ಸರ್ವಿಸ್ ಕಮಿಶನ್ ಸದಸ್ಯ.
೧೯೧೨	ಭಾರತ ಮೂಲದ ಕಾರ್ಮಿಕರ ಸ್ಥಿತಿಗತಿಗಳ ಅಧ್ಯಯನಕ್ಕಾಗಿ ದಕ್ಷಿಣ ಆಫ್ರಿಕಾ ಪ್ರವಾಸ.
೧೯೧೩	ಮೂರನೆ ಬಾರಿ ಲಂಡನ್ ಪ್ರವಾಸ.
೧೯೧೫ಫೆ-೧೯	ನಿಧನ, ಪುಣೆಯಲ್ಲಿ.

ಮಾನವನ ಅಭ್ಯುದಯದಲ್ಲಿ ಪುಸ್ತಕಗಳ ಪಾತ್ರ

ಡಾ॥ ಕೆ. ಲೀಲಾಪ್ರಕಾಶ್

ನಮ್ಮ ಮಸ್ತಕದಲ್ಲಿ ತುಂಬಿರುವ ಹೂಳನ್ನು ದೂರಸರಿಸಿ ಸದಾ ಕಾಂತಿಯಿಂದ ವರ್ಧಿಸುವಂತೆ ಮಾಡುವಲ್ಲಿ ಪುಸ್ತಕಗಳ ಪಾತ್ರ ಬಲು ಹಿರಿದು. ಪ್ರಬುದ್ಧ ಮಾನವನ ಅನುಪಮ ಸೃಷ್ಟಿಯೆಂದರೆ ಗ್ರಂಥಗಳು. ಸ್ಮಾರಕಗಳು ಬಿದ್ದುಹೋಗಬಹುದು, ದೇವಾಲಯಗಳು ನಶಿಸಬಹುದು, ರಾಷ್ಟ್ರಗಳು ಉರುಳಬಹುದು ಆದರೆ ಪುಸ್ತಕಗಳು ಮಾತ್ರ ಸದಾ ಹೊಚ್ಚ ಹೊಸದಾಗಿರುತ್ತವೆ, ಚಿರುಯೌವನಯುಕ್ತವಾಗಿರುತ್ತವೆ.

ಸ್ವಾಮಿವಿವೇಕಾನಂದರ ಉಕ್ತಿ ಬಹಳ ಬೆಲೆಯುಳ್ಳದ್ದು; "ನಮ್ಮ ಅಂತರಂಗದ ಪುಸ್ತಕ ತೆರೆಯುವ ತನಕ ಉಳಿದೆಲ್ಲ ಪುಸ್ತಕಗಳು ಉಪಯೋಗಕ್ಕೆ ಬಾರವು." ಜೋಸೆಪ್ ಎಡಿಸನ್ ಎಂಬ ಆಂಗ್ಲ ಲೇಖಕ "ಗ್ರಂಥಗಳು ಇನ್ನೂ ಹುಟ್ಟದಿರುವ ಜನಾಂಗದ ಆಸ್ತಿ" ಎಂದಿದ್ದಾರೆ. 'ಪ್ರಪಂಚವನ್ನು ಮರೆತೇನು ಆದರೆ ಪುಸ್ತಕವನ್ನು ಮರೆಯಲಾರೆ' ಎಂದು ಸಿಸಿರೋ ಹೇಳಿದ್ದಾರೆ. "ಗ್ರಂಥಾಲಯಗಳು ಜ್ಞಾನದ ದೇಗುಲವಾದರೆ, ಗ್ರಂಥಗಳು ಜ್ಞಾನಭಂಡಾರದ ಕೀಲಿಕೈ ಎನ್ನುತ್ತಾರೆ ಕಾರ್ಲೈಲ್. ಪುಸ್ತಕಗಳ ಹಿರಮೆ-ಗರಿಮೆಯ ಬಗ್ಗೆ ಜನ ಸಾಕಷ್ಟು ರೀತಿಯಲ್ಲಿ ಸದಾಕಾಲ ನುಡಿಯುತ್ತಲೇ ಇರುತ್ತಾರೆ. ಅವುಗಳಲ್ಲಿ ಮಹಾಕವಿ ಮಿಲ್ಟನ್‌ನ ಮಾತು ಅಭೂತ ಪೂರ್ವವಾದುದು. "ಒಂದು ಒಳ್ಳೆಯ ಪುಸ್ತಕ ಬದುಕಿನಾಚೆಯ ಬದುಕಿಗೋಸ್ಕರ ಉದ್ದೇಶಪೂರ್ವಕವಾಗಿ ಸುರಕ್ಷಿತಗೊಳಿಸಲ್ಪಟ್ಟ ಮಹಾಚೇತನವೋದರ ಅಮೂಲ್ಯ ಜೀವರಸ ಎಂಬುದಾಗಿ ನುಡಿದಿದ್ದಾನೆ.

ಮಾನವ ಇತರ ಪ್ರಣಿಗಳಿಗಿಂತ ಭಿನ್ನನಾಗಿ ಇಂದಿನ ಪ್ರಗತಿಗೆ ಮುಖ್ಯ ಕಾರಣನಾದರೆ ಅದಕ್ಕೆ ಮಾನವನ ಅಸಾಧಾರಣ ಪ್ರಜ್ಞಾಶಕ್ತಿಯೇ ಮೂಲ. ಮಾನವನ ಪ್ರತಿಭಾಶಕ್ತಿಯನ್ನು ವಿಸ್ತರಿಸಿಕೊಳ್ಳಲು ಪುಸ್ತಕವು ಮುಖ್ಯ ಪಾತ್ರ ವಹಿಸುತ್ತಿದೆ. ಪ್ರಾಚೀನ ಕಾಲದಿಂದ ಕಂಪ್ಯೂಟರ್ ಯುಗದವರೆಗೆ ಅನೇಕ ಸಂಪರ್ಕ ಮಾಧ್ಯಮಗಳು ಇವೆಯಾದರೂ ಪುಸ್ತಕದ ಮಹತ್ವ ಕಡಿಮೆಯಾಗಿಲ್ಲ. ಮನುಷ್ಯ ಚಿಂತನಶೀಲ ವ್ಯಕ್ತಿಯಾಗಲು ಗ್ರಂಥಗಳೇ ಅವನ ಜೀವನಾಧಾರ. ಪುಸ್ತಕವೇ ಇಲ್ಲದ ಪ್ರಪಂಚವನ್ನು ಊಹಿಸಲು ಆಗದ ಮಾತು. ಒಂದು ಉಕ್ತಿ ಹೇಳುವಂತೆ –

Man who kills a resonable creature can kill God's image, but he who dislikes a good book kills reason itself.

ಒಬ್ಬ ಮನುಷ್ಯನನ್ನು ಕೊಂದರೆ ಚಿಂತನಕ್ರಮಜೀವಿಯಾದ ದೇವರ ಪ್ರತಿಮೆಯನ್ನು ನಾಶಮಾಡಿದಂತೆ, ಆದರೆ ಒಂದು ಶ್ರೇಷ್ಠ ಗ್ರಂಥವನ್ನು ನಾಶಮಾಡಿದರೆ ಚಿಂತನೆಯನ್ನೇ ಕೊಂದಂತೆ.

ಅಕ್ಷರ ಜ್ಞಾನವಿಲ್ಲದ ಮನುಷ್ಯ ಆದಿಮಾನವನಿಗಿಂತ ಅಧಿಕವನ್ನೇನೂ ಸಾಧಿಸಲಾರ ಮಾನವ–ಮಾನವರ ಸಂವಹನದ ಕೊಂಡಿಯಾಗಿರುವುದೇ ಭಾಷೆ ಆ ಭಾಷೆಯ ಸರ್ವಾಂಗೀಣ ಪ್ರಗತಿಗೆ ಪುಸ್ತಕಗಳೇ ಮೂಲಾಧಾರ.

ಫ್ರಾನ್ಸಿಸ್ ಬೇಕನ್‌ನ ಪ್ರಕಾರ– some books are to be tasted, others to be chewed and digested.

ಎಲ್ಲ ಪುಸ್ತಕಗಳೂ ಒಂದೇ ತೆರನಾಗಿರುವುದಿಲ್ಲ. ಕೆಲವನ್ನು ಅಗಿದು ನುರಿಯಬೇಕು, ಕೆಲವನ್ನು ಕೇವಲ ರುಚಿನೋಡಬೇಕು, ಇನ್ನೂ ಕೆಲವನ್ನು ಜೀರ್ಣಿಸಿಕೊಳ್ಳಬೇಕು.

ಹೊತ್ತಗೆ ಅಥವಾ ಪುಸ್ತಕ ಮಾನವನ ಜ್ಞಾನಕ್ಕೆ ಜ್ವಾಲ್ಯಮಾನವಾದ ಕೈದೀವಿಗೆಯಿದ್ದಂತೆ. ಆ ಪ್ರಕಾರದ ಬೆಳಕಿಲ್ಲದೆ ಮಾನವನು ತನ್ನ ವಿದ್ಯೆಯಲ್ಲಿ ಮುಂದುವರೆದರೆ ಪರಿಮಾಣುವಿನಿಂದ ಪಾರಲೌಕಿಕದವರೆಗೆ, ಆಕಾಶದಿಂದ ಪಾತಾಳದವರೆಗೆ ಸಾಗರದಡಿಯಲ್ಲಿ ಬರುವ ಸಕಲ ವಸ್ತುಗಳ ಬಗ್ಗೆ ಗ್ರಾಹ್ಯಮಾಡಲು ಪುಸ್ತಕಕ್ಕಿಂತ ಬೇರೆ ಸಾಧನವಿಲ್ಲ. ಕಡು ಬಡವನಿಂದ ಧನಿಕನವರೆಗೂ ಹೆಚ್ಚು ಖರ್ಚಿಲ್ಲದೇ ಹೆಚ್ಚು ಜಾಗದ ಅವಶ್ಯಕತೆಯೂ ಇಲ್ಲದೆ, ಬುದ್ಧಿವಿಸ್ತರಣೆಗಿರುವ ಅನೇಕ ಸಾಧನಗಳಲ್ಲಿ ಪುಸ್ತಕವು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಮಹಾಭಾರತದಲ್ಲಿ ಹೇಳುವಂತೆ

‘ಯಸ್ಯನಾಸ್ತಿ ಸ್ವಯಂ ಪ್ರಜ್ಞಾ ಕೇವಲಂ ತು ಬಹುಶ್ರುತಃ
ನ ಸ ಜಾನಾತಿ ಶಾಸ್ತ್ರಾರ್ಥಂ ದರ್ವೀ ಸೂಪರಸಾಸಿವ’

(ಮಹಾಭಾರತ, ಸಭಾ–೨೫ರಲ್ಲಿ) ಯಾವಾತನು ಸ್ವಯಂ ವಿಚಾರಶಕ್ತಿಯಿಲ್ಲದೇ ಬಾಯಿಪಂಡಿತನು ಮಾತ್ರ ನಾಗಿರುವನೋ, ಅವನಿಗೆ ಶಾಸ್ತ್ರದ ರಹಸಾರ್ಥವು ಹೊಳೆಯಲಾರದು. ಅವನು ಕೇವಲ ಸಾರಿನಲ್ಲಿರುವ ಸೌಟಿನಂತೆ, ರಸಜ್ಞನಾಗಲಾರ.

ಪುಸ್ತಕ ಸಂಸ್ಕೃತಿ ಎನ್ನುವುದು ನಮ್ಮ ಭುವನದ ಭಾಗ್ಯ ಕಾಲದಿಂಧ ಇಂದಿನವರೆಗೂ ಪುಸ್ತಕಗಳು ಸಕಲವಿಷಯಗಳನ್ನು ಸರ್ವರಿಗೂ ಬೋಧಿಸುವ ರನ್ನಗನ್ನಡಿಯಾಗಿದೆ. ರಿಚರ್ಡ ಡೀಬರಿಯವರ ಮಾತಿನಂತೆ “ಓ! ಪುಸ್ತಕಗಳೆ; ನೀವು ದೇವಮಂದಿರದ ಚಿನ್ನದ ಪಾತ್ರೆಗಳು; ಕೈಯಲ್ಲಿ ಹಿಡಿಯಬಹುದಾದ ಪ್ರಜ್ವಲಿಸುವ ಹೊಂಗಿರಣದ ಜ್ಯೋತಿಗಳು”

ಸರ್ವೋದಯ ವಿಚಾರದ ವಿಶೇಷತೆ

—ವಿನೋಬಾ

"ನನಗೇನೊ ಸರ್ವೋದಯಸಮಾಜದ ಬಗ್ಗೆ ಪೂರ್ತ ಸಹಾನುಭೂತಿ ಇದೆ. ಆದರೆ ನಾನು ಅದಕ್ಕೆ ದಾಖಲಿಸಿಕೊಳ್ಳ ಬಯಸುವುದಿಲ್ಲ. ಏಕೆಂದರೆ ಅದರಲ್ಲಿ ರಾಜನೀತಿಯಿಲ್ಲ. ಇತ್ತೀಚಿನ ದಿನಗಳಲ್ಲಿ ರಾಜನೀತಿ ಇಲ್ಲದೆ ಯಾವುದೇ ಪ್ರಕಾರದ ಸಾಮಾಜಿಕ ಕ್ರಾಂತಿಯಾಗಲು ಸಾಧ್ಯವಿಲ್ಲ"ವೆಂದು ಒಬ್ಬ ಸಹೋದರ ಹೇಳಿದ. ಅದಕ್ಕೆ ನಾನು ಹೇಳಿದೆ, ನೀವು ಮೂರು ವಿಚಾರ ಹೇಳಿದ್ದೀರಿ. ಆ ಮೂರೂ ವಿಚಾರಗಳ ಮೂಲದಲ್ಲಿ ಭ್ರಮೆ ಇದೆ. ಸರ್ವೋದಯಸಮಾಜ ಸೇರಲು ನೋಂದಣಿ ಮಾಡಿಕೊಳ್ಳಬೇಕಾಗುತ್ತದೆಂದು ನೀವು ತಿಳಿದಿದ್ದೀರಿ ಇದು ಒಂದು ಭ್ರಮೆ. ಇಂಥ ಮಾತು ಅಲ್ಲೇನಿಲ್ಲ. ಯಾರು ಸರ್ವೋದಯ ವಿಚಾರವನ್ನು ಒಪ್ಪುತ್ತಾರೋ ಅವರು ಸರ್ವೋದಯಸಮಾಜದಲ್ಲಿ ಇದ್ದಂತೆಯೇ. ಹೆಸರು ದಾಖಲಿಸಿಕೊಂಡವರು ಮಾತ್ರ ಸರ್ವೋದಯ ಸಮಾಜದ ಸೇವಕರಾಗುತ್ತಾರೆಂಬ ಕಲ್ಪನೆಯಿಲ್ಲ. ಹೆಸರು ನೊಂದಾಯಿಸಿಕೊಳ್ಳುವವರು ಕೆಲವೇ ಸಾವಿರ, ಆದರೆ ಸರ್ವೋದಯಸಮಾಜದ ಅಲಿಖಿತ ಸೇವಕರು ಲಕ್ಷಾಂತರ! ಅವರೆಲ್ಲರ ಹೆಸರು ಎಲ್ಲೂ ದಾಖಲಾಗುವುದಿಲ್ಲ. ನಾವು ಸರ್ವೋದಯ ಸಮಾಜದವರೆಂದು ಅವರು ಹೇಳಿದರೆ ಖಂಡಿತ ಅವರು ಸರ್ವೋದಯ ಸಮಾಜದವರು. ನೀವು ಹೇಳಿದ ಎರಡನೇ ಮಾತು, "ಸರ್ವೋದಯ ವಿಚಾರದಲ್ಲಿ ರಾಜನೀತಿ ಇಲ್ಲ."

ಕೇವಲ ಅಧಿಕಾರದ ಲೋಭವನ್ನಿಟ್ಟುಕೊಂಡಿರುವ ಅದೂರದರ್ಶಿ ರಾಜನೀತಿ ಸರ್ವೋದಯದಲ್ಲಿಲ್ಲ. ಏಕೆಂದರೆ ಅಂಥ ರಾಜನೀತಿ ಸರ್ವೋದಯಕಾರಿಯಾಗಿರುವುದಿಲ್ಲ. ಅಂಥ ರಾಜನೀತಿ ಸ್ವಾರ್ಥ ಅಥವಾ ಸ್ವಕೀಯಾರ್ಥಿಯಾಗಿರುತ್ತದೆ. ತುಳಸಿದಾಸರು ಬಹು ಸುಂದರ ಮಾರ್ಮಿಕ ವಚನ ಹೇಳಿದ್ದಾರೆ. "ತನ್ನ ಒಳ್ಳೆಯದನ್ನು ಮಾತ್ರ ಬಯಸುವಂಥವರು ಎಲ್ಲರೂ ಆಗಿರುತ್ತಾರೆ. ತಮ್ಮವರ ಹಿತ ಮಾತ್ರ ಬಯಸುವವರು ಕೆಲವರಿರುತ್ತಾರೆ. ಆದರೆ ಎಲ್ಲರ ಹಿತ ಬಯಸುವವರು ಹರಿಚರಣ ದಾಸರು ಮಾತ್ರ."

ಹರಿಪಾದ ದಾಸರು ಯಾವುದೇ ವಿಶಿಷ್ಟ ಪ್ರಕಾರದ ಪಕ್ಷ ರಾಜನೀತಿಯನ್ನು ಒಪ್ಪಲಾರರು. ಶಕ್ತಿಕ್ಷಯಕಾರಿ ರಾಜನೀತಿ ಅದರದ್ದಾಗಿರುವುದಿಲ್ಲ. ಎಲ್ಲರನ್ನೂ ಒಗ್ಗೂಡಿಸುವ, ಎಲ್ಲರ ಶಕ್ತಿ ವರ್ಧಿಸುವಂಥದ್ದೂ ಕೂಡ ಒಂದು ರಾಜನೀತಿಯಾಗಿರುತ್ತದೆ.

ಆಧುನಿಕ ಕಾಲದಲ್ಲಿ ಸಾಮಾಜಿಕ ಕ್ರಾಂತಿ ರಾಜನೀತಿಯ ಆಧಾರದ ಮೇಲೆಯೇ ಆಗುತ್ತದೆಂಬುದು ನಿಮ್ಮ ಮೂರನೇಯ ಭ್ರಮೆ. ಭಾವಿ ಕಾಲವನ್ನು ಗುರುತಿಸದೇ ಇರುವಂಥವರ ಮನೋಲಕ್ಷಣಗಳು ಇವು. ಅಧಿಕಾರದ ದಿನಗಳು ಹೋದವು, ಅಲ್ಪಸಂಖ್ಯಾಂತರ ಅಧಿಕಾರದ ದಿನಗಳು ಹೋದವು, ಬಹುಸಂಖ್ಯಾಂತರ ಅಧಿಕಾರ ದಿನಗಳೂ ಕೂಡ ಹೋಗುತ್ತಲಿವೆ. ಈಗ ಸಕಲರ ಅಧಿಕಾರದ ಕಾಲ ಬರುತ್ತಿದೆ. ಎಲ್ಲರ ಅಧಿಕಾರ ಅಂದರೆ ಎಲ್ಲರ ಓಟು ಮಾತ್ರವಲ್ಲ, ಹಾರ್ದಿಕ ಸಹಕಾರ. ಎಲ್ಲರಲ್ಲಿ ನಾನಿದ್ದೇನೆ ಮತ್ತು ನನ್ನಲ್ಲಿ ಎಲ್ಲರಿದ್ದಾರೆ ಎಂಬ ಅನುಭೂತಿಯ ಅಧಿಕಾರದ ಯುಗ ಬುರುತ್ತಿದೆ. ಅದಕ್ಕೆ ನಾವು ಅನುಕೂಲವಾದರೆ ಸರಿ. ನಮಗೆ ಸಫಲತೆ ದೊರೆಯುವದು. ಇಲ್ಲವಾದರೆ, ನಮ್ಮ ಹೊರತಾಗಿಯೂ ಅದು ಬಂದೇ ಬರುವುದು. ಇದು ಕ್ರಾಂತಿ ವಿಚಾರದ ಮಾತು. ವಿಚಾರಕ್ರಾಂತಿ ಯಾವುದೇ ಯುಗದಲ್ಲಿ ರಾಜಕಾರಣದ ದಾಸಿಯಾಗಿರುವುದಿಲ್ಲ. ಈ ಯುಗದಲ್ಲೂ ಕೂಡ ಅದು ರಾಜಕಾರಣದ ದಾಸಿಯಾಗಿರುವುದಿಲ್ಲ ಅಧಿಕಾರ ಬಂದಿದೆ ಎಂದು ತೋರುತ್ತಿದ್ದರೂ ಅದು ಕೈಗೆ ಬರುತ್ತಿದ್ದ ಹಾಗಯೇ ಬದಲಾಗಿಬಿಡುತ್ತದೆ. ಅದು ತನ್ನ ಮನಸ್ಸಿನಲ್ಲಿಯ ಶಿಕ್ಷಣವನ್ನು ಜಾರಿಗೆ ತರುವದು ಮತ್ತು ಎಲ್ಲರ ತಲೆಯಲ್ಲಿ ತನ್ನ ವಿಚಾರಗಳನ್ನು ತುಂಬುವದು. ಆದರೆ ಇದು ತುಂಬ ಆಭಾಸವುಳ್ಳದ್ದು. ಇಸ್ಪೀಟ್ಟಿನ ಮನೆ ಕಟ್ಟುತಲೆ ಅದು ಬಿದ್ದುಬಿಡುತ್ತದೆ. ಶಿಕ್ಷಣದ ಮೇಲೆ ರಾಜಕೀಯ ಸತ್ತೆ ಹಿಡಿತವನ್ನು ಇಟ್ಟುಕೊಂಡು ಎಲ್ಲರಿಗೂ ಒಂದೇ ವಿಚಾರ ಕೊಟ್ಟು ಸ್ವತಂತ್ರ ವಿಚಾರವನ್ನು ಶೂನ್ಯವತ್ತಾಗಿ ಮಾಡಿತೋ ಅಂಥ ಅಧಿಕಾರವನ್ನು ಸಂಪೂರ್ಣ ಉಚ್ಛೇದದ ಯುದ್ಧ ಶುರುವಾಯಿತೆಂದೇ ಲೆಕ್ಕ, ಗಾಳಿ ಬೀಸಿದ ತಕ್ಷಣ ಆ ಕಟ್ಟಡ ಬಿದ್ದು ಹೋಗುತ್ತದೆ.

ಸ್ವತಂತ್ರ ಮತ್ತು ಭಿನ್ನಭಿನ್ನ ವಿಚಾರಗಳ ಬಗ್ಗೆ ಗಮನವಿರಿಸಿ ಕೊಳ್ಳುತ್ತದೆಂಬುದು ಸರ್ವೋದಯ ವಿಚಾರದ ವಿಶೇಷತೆ. ಅದು ಯಾವುದೇ ವಿಶಿಷ್ಟ ವ್ಯವಸ್ಥೆ ಅಥವ ವಿಶಿಷ್ಟ ಬಾಹ್ಯ ಆಕಾರದ ಬಗ್ಗೆ ಆಗ್ರಹ ಇಟ್ಟುಕೊಳ್ಳುವುದಿಲ್ಲ. ಅದು ಬೇಡಿಯನ್ನು ಒಪ್ಪುವುದಿಲ್ಲ. ಯಾವುದೇ ಪ್ರಕಾರದ ನಮೂನೆಯನ್ನೂ ಬಯಸುವುದಿಲ್ಲ. ಸಂಘಟನೆಯೇ ಶಕ್ತಿಶಾಲಿ ಎಂದು ಒಪ್ಪಿ ಕುಳಿತುಕೊಳ್ಳುವುದಿಲ್ಲ. ಬದಲಿಗೆ ಸತ್ಯದ ಶಕ್ತಿಯನ್ನು ಗುರುತಿಸುತ್ತದೆ. ಅಶಕ್ತಿ ಸಂಘಟಿತವಾದ ಕೂಡಲೆ ಶಕ್ತಿಯಾಗುತ್ತದೆ ಎಂಬ ಆಭಾಸದಲ್ಲಿ ಅದು ಸಿಕ್ಕಿಹಾಕಿಕೊಳ್ಳುವುದಿಲ್ಲ. ಸೋಮಾರಿ ಜನರು ಸುಲಭವಾಗಿ ಶಕ್ತಿವಂತರಾಗುವ ರೀತಿಯನ್ನು ಕಂಡುಹಿಡಿದ ಶೋಧನೆ.

ರೋಗಿಗಳ ಸಂಘಟನೆಯಾಗುವುದರಿಂದಲೇ ಆರೋಗ್ಯವುಂಟಾಗುವುದಾದರೆ ವೈದ್ಯರ ಅಗತ್ಯವೇ ಇರುವುದಿಲ್ಲ, ಔಷಧಿಗಳ ಮತ್ತು ಪೌಷ್ಟಿಕ ಆಹಾರದ ಅಗತ್ಯವೂ ಇರುವುದಿಲ್ಲ.

ಸಂಘಟನೆಯ ಕಾರ್ಯದಲ್ಲಿ ಸರ್ವೋದಯ ತನ್ನನ್ನು ತೊಡಗಿಸಿಕೊಳ್ಳುವುದಿಲ್ಲ. ಆದರೆ ಸರ್ವೋದಯದ ಸೇವಕ ಎಲ್ಲ ಕೆಲಸಮಾಡಲು ಮುಕ್ತವಾಗಿದ್ದಾನೆ. ಅಗತ್ಯವೆನಿಸಿದರೆ ಅವನು ಸ್ಥಾನೀಯ ಸಂಘಟನೆ ಮಾಡಿಕೊಳ್ಳಬಹುದು ಆದರೆ ಅದು ವಿಚಾರನಿಷ್ಠ ಸಂಘಟನೆಯಾಗಿರುತ್ತದೆ. ಅದರಲ್ಲಿ ಪ್ರತಿಯೊಬ್ಬ ವ್ಯಕ್ತಿ ಪ್ರತಿಯೋರ್ವನ ಪರಿಚಯ ಹೊಂದಿರುತ್ತಾನೆ. ಅದರಲ್ಲಿ ಜಂಬಕ್ಕಾಗಿ ಯಾವ ಅವಕಾಶವೂ ಇರುವುದಿಲ್ಲ. ಅದರಲ್ಲಿ ಅಭಿಮಾನದ ಪ್ರವೇಶವೂ ಇರುವುದಿಲ್ಲ. ಚಿಕ್ಕಪ್ರಮಾಣದ ಸಂಘಟನೆಯಾದರೆ ಈ ಎಲ್ಲ ಪ್ರಕಾರದ ದೋಷಗಳನ್ನು ಸುಲಭವಾಗಿ ತಪ್ಪಿಸಬಹುದು. ಜಂಬ ಮತ್ತು ಅಭಿಮಾನ ಎಷ್ಟು ಸೂಕ್ಷ್ಮ ದೋಷಗಳಿವೆಯೆಂದರೆ ಅವು ಎಲ್ಲಿಯೂ ಕೂಡ ಪ್ರವೇಶ ಮಾಡಬಲ್ಲವು. ತನ್ನ ಚಿಕ್ಕದಾದ ಸಂಘಟನೆಯಲ್ಲಿಯೂ ಈ ದೋಷಗಳು ನುಸುಳುತ್ತಿವೆ ಎಂದು ಸೇವಕನಿಗೆ ಗೊತ್ತಾದ ಕೂಡಲೇ ಆ ಸಂಘಟನೆಯನ್ನು ಅವನು ಮುರಿದು ಹಾಕುವನು. ಆದರೆ ಇಂಥ ಪರಿಸ್ಥಿತಿ ಬರದಂತೆ ಅವನು ಎಚ್ಚರವಹಿಸುವನು. ಯಾವುದನ್ನೇ ಆತ ಮಾಡಿದರೂ ಅದರ ಎಲ್ಲ ಜವಾಬ್ದಾರಿ ಅವನ ಸ್ವಂತದ್ದಾಗಿರುತ್ತದೆ. ಆದ್ದರಿಂದ ತನ್ನ ಜವಾಬ್ದಾರಿ ಅರಿತು ಕೆಲಸ ಮಾಡುವನು ಮತ್ತು ಮುನ್ನಡೆಯುವನು.

ಸಾಭಾರ ಸರ್ವೋದಯ ಜಗತ್, ಅನು: ಸು ಕೌ.

ಚಿಂತನೆಗೊಂದು ಸಂಗತಿ

ನಿರ್ವಾತದಲ್ಲಿ ಕನ್ನಡ

ಕನ್ನಡ ಹಿರಿಯ ಸಾಹಿತಿ ನಡೋಜ ಡಾ॥ದೆ.ಜವರೇಗೌಡರವರು ಮೇ ೩೦ರಂದು ತೀರಿಕೊಂಡರು. ಅವರು ಸುಮಾರು ೯೯ ವರ್ಷಗಳ ಕಾಲ ಕ್ರಿಯಾಶೀಲರಾಗಿ ಜೀವಿಸಿದರು. ಈ ಅವಧಿಯನ್ನು ಅವರು ವಿವಿಧ ಪ್ರಕಾರದ ಸಾಹಿತ್ಯ ರಚಿಸುವ ಕಾಯಕಕ್ಕೆ ಮೀಸಲಾಗಿಟ್ಟಿದ್ದರು. ಅಷ್ಟೇ ತೀವ್ರತರವಾಗಿ ಕನ್ನಡ ವರಕವಿ ಕುವೆಂಪುರವರ ವಿಚಾರ ಮತ್ತು ಸಾಹಿತ್ಯದ ಪ್ರಚಾರಕ್ಕಾಗಿಯೂ ಸಮಯವನ್ನು ಮೀಸಲಾಗಿಟ್ಟಿದ್ದರು. ನಿರಂತರವಾದ ಈ ಎಲ್ಲ ಕಾರ್ಯಚಟುವಟಿಗಳ ಜೊತೆಗೆ ಕನ್ನಡ ಭಾಷೆಯನ್ನು ಉಳಿಸುವ ಬಗ್ಗೆ ಅಹರ್ನಿಶಿ ಚಿಂತನೆಮಾಡುತ್ತಿದ್ದರು ಮತ್ತು ಅಗತ್ಯವಿದ್ದಾಗ ಹೋರಾಟವನ್ನೂ ಮಾಡುತ್ತಿದ್ದರು. ಜವರೇಗೌಡರವರು ಈ ಎಲ್ಲ ಕಾರಣದಿಂದಾಗಿ "ಕನ್ನಡದ ಕಟ್ಟಾಳು" ಎಂಬ ಬಿರುದಿಗೆ ಪಾತ್ರರಾದರು.

ಅವರು ತೀರಿಕೊಂಡಾದ ಮೇಲೆ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದ ಎಲ್ಲ ಸಾಹಿತಿಗಳು, ಕನ್ನಡದ ಹೋರಾಟಗಾರರು, ರಾಜಕಾರಣಿಗಳು ದಿವಂಗತರ ಕನ್ನಡಾಭಿಮಾನವನ್ನು ಗುಣಗಾನ ಮಾಡಿದ್ದೇ ಮಾಡಿದ್ದು. ಇದೇ ಸರಿಸುಮಾರು ಸಮಯಕ್ಕೆ ಕರ್ನಾಟಕ ಸರ್ಕಾರವು ರಾಜ್ಯದಲ್ಲಿರುವ ಎರಡು ಸಾವಿರ ಕನ್ನಡ ಶಾಲೆಗಳುನ್ನು ಮುಚ್ಚುವ ಪ್ರಕ್ರಿಯೆಯನ್ನು ನಡೆಸಿತ್ತು. ಪ್ರಧಾನ ಮಂತ್ರಿಯವರ ಕಛೇರಿಯಲ್ಲಿ ವ್ಯವಹಾರಕ್ಕೆಂದು ದೇಶದ ೫ ಪ್ರಮುಖ ಭಾಷೆಗಳನ್ನು ಅಳವಡಿಸಿಕೊಂಡ ಸುದ್ದಿ ಪ್ರಕಟವಾಯಿತಾದರೂ ದೇಶದ ಆ ಪ್ರಮುಖ ಭಾಷೆಗಳಲ್ಲಿ ಕನ್ನಡ ಮಾಯವಾಗಿತ್ತು! ಇದು ರಾಷ್ಟ್ರಮಟ್ಟದಲ್ಲಿ ಕನ್ನಡಕ್ಕಿರುವ ಸ್ಥಾನವನ್ನು ತೋರಿಸುತ್ತದೆ. ಕನ್ನಡ ಭಾಷೆಯ ಗಂಡುಸ್ಥಳಗಳೆಂದು ಭಾವಿಸಲಾಗಿರುವ ನಾಡಿನ ಎಲ್ಲ ಹಳ್ಳಿಗಳಲ್ಲಿ ಸರ್ಕಾದ ಕನ್ನಡ ಶಾಲೆಗಳು ಕಣ್ಣುಮುಚ್ಚಿ ಅವುಗಳ ಸ್ಥಾನದಲ್ಲಿ 'ಇಂಟರ್‌ನ್ಯಷನಲ್ ಸ್ಕೂಲ್, ಕ್ಯಂಬ್ರಿಜ್‌ಸ್ಕೂಲ್, ಆಕ್ಸವರ್ಡ ಸ್ಕೂಲ್' ಹೆಸರಿನಲ್ಲಿ ಇಂಗ್ಲೀಷ ಮಾಧ್ಯಮದ ಶಾಲೆಗಳು ಕಣ್ಣು ತೆರೆಯುತ್ತಿವೆ. ಇಂಥ ಶಾಲೆಗಳನ್ನು ಪ್ರಾರಂಭಿಸುತ್ತಿರುವವರು ಕನ್ನಡದ ಕಟ್ಟಾಭಿಮಾನಿಗಳೆಂದು ಭಾವಿಸಲಾಗಿರುವ ರೈತರೆ ಅಥವಾ ಅವರ ಮಕ್ಕಳೇ.

ಬೆಂಗಳೂರು ನಗರದಲ್ಲಿರುವ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕನ್ನಡ ಸೊಲ್ಲೆ ಇಲ್ಲ. ರಾಜ್ಯದಲ್ಲಿರುವ ಆಕಾಶವಾಣಿ ಕೇಂದ್ರಗಳು ಹಿಂದಿಭಾಷಾ ಪ್ರಚಾರ ಕೇಂದ್ರಗಳಾಗಿವೆ. ಕನ್ನಡ ನಾಡಿನಲ್ಲಿರುವ ಇಂಗ್ಲೀಷ ಮಾಧ್ಯಮದ ಶಾಲೆಗಳಲ್ಲಿ ಕನ್ನಡ ಮಾತನಾಡಿದರೆ ಮಕ್ಕಳಿಗೆ ಶಿಕ್ಷೆ ಕೊಡುವ ಅಥವಾ ದಂಡ ಹಾಕುವ ಪದ್ಧತಿ ಇದೆ. ಇದು ಬಹಿರಂಗವಾಗಿರುವ ಸಂಗತಿ. ಕನ್ನಡ ತನ್ನ ರಾಜ್ಯಭಾಷೆ ಎಂದು ಹೇಳಿಕೊಳ್ಳುವ ಕರ್ನಾಟಕ ಸರ್ಕಾರ ಈ ವಿಷಯದಲ್ಲಿ ಪುರುಷಸಿಂಹನಂತೆ ವರ್ತಿಸುತ್ತಿಲ್ಲ. ಕನ್ನಡದ ಉಳಿವಿಕೆಗಾಗಿ ಹತ್ತಾರು ಸಂಸ್ಥೆಗಳನ್ನು ಸರ್ಕಾರ ಸೃಷ್ಟಿಸಿದೆ. ಅವುಗಳಿಗೆ ಕನ್ನಡಾಭಿಮಾನ ಇರುವಂತಹವರನ್ನು ಅಧ್ಯಕ್ಷರನ್ನಾಗಿ ನೇಮಿಸಿದೆ. ಅವರಿಗೆ ಮಂತ್ರಿಮಾನ್ಯರಿಗಿರುವಂಥ ಸೌಲಭ್ಯಗಳನ್ನು ಕೊಟ್ಟಿದೆಯಾದರೂ ಕರ್ನಾಟಕದ ನಗರಗಳಲ್ಲಿ ಶರವೇಗದಂತೆ ಕನ್ನಡ ಮಾಯವಾಗುತ್ತಿದೆ. ಗಡಿ ಪ್ರದೇಶದಲ್ಲಿಯ ಕನ್ನಡ ಮತ್ತು ಕನ್ನಡಿಗರ ಸ್ಥಿತಿ ಶೋಚನೀಯ.

ಇನ್ನು ಎರಡು ತಿಂಗಳಲ್ಲಿ ಕನ್ನಡ ರಾಜ್ಯೋತ್ಸವ ಬರುತ್ತದೆ. ಆಗ ಕನ್ನಾಡಾಭಿಮಾದ ಮಾತುಗಳು ಗಗನ ಮುಟ್ಟುತ್ತವೆ. ಅದೇ ಸಮಯಕ್ಕೆ ಭೂಮಿಯ ಮೇಲಿನ ಕನ್ನಡ ಪಾತಾಳಕ್ಕೆ ಹೋಗುತ್ತಿರುತ್ತದೆ! ಗೋಕಾಕ ಚಳುವಳಿಯ ಮಾತು ಆಗಾಗ್ಗೆ ಕೇಳಿ ಬರುತ್ತದೆ. ಆದರೆ ಆ ಚಳುವಳಿಯ ಬಗ್ಗೆ ಕನ್ನಡದ ಹುಟ್ಟುಹೋರಾಟಗಾರರು ಅದರ ವಿಸ್ಮೃತಿಯಲ್ಲಿ ರಮಿಸುತ್ತಿದ್ದಾರೆ.

ದೆ.ಜವರೇಗೌಡರಂಥ ಹಿರಿಯ ಕನ್ನಡ ಚೇತನ ಕಣ್ಮರೆಯಾದಾಗ ಮಾತ್ರ ಕನ್ನಡಾಭಿಮಾನವನ್ನು ಪ್ರದರ್ಶಿಸುವ ಕನ್ನಡಾಭಿಮಾನ ಇನ್ನು ಸಾಕು, ಇದುವರೆಗೆ ಕನ್ನಡ ಉಳಿಸುವ ಹೋರಾಟ ನಿರ್ವಾತದಲ್ಲಿ ನಡೆದ ಹೋರಾಟವಾಗಿದೆ. ಗಾಳಿ ಗುದ್ದಿ ಮೈ ಕೈ ನೋಯಿಸಿಕೊಳ್ಳುವಂಥದ್ದಾಗಿದೆ. ಇದುವರೆಗೆ ಆಗಿಹೋದ ಎಲ್ಲ ಕನ್ನಡ ಧೀಮಂತ ವರಪುತ್ರರಿಗೆ ನ್ಯಾಯ ದೊರಕಿಸಿ ಕೊಡಬೇಕಾದರೆ ಕನ್ನಡಿಗರು ಕನ್ನಡ ಉಳಿಸುವ ಬಗ್ಗೆ ಎದೆಗಾರಿಕೆಯ ಹೋರಾಟ ಪ್ರಾರಂಭಿಸಬೇಕು. ಅದಕ್ಕಾಗಿಯೇ ಪ್ರದೇಶಿಕ ರಾಜಕೀಯ ಪಕ್ಷವನ್ನೂ ಕಟ್ಟಬೇಕು. ಇದನ್ನು ನಾವು ತಿಳಿಯಬೇಕು, ತಿಳಿದು ಉಳಿಯಬೇಕು. ಇಲ್ಲವೆ ಅಳಿಯಬೇಕು.

"ಧರ್ಮದ ಹೆಸರಿದೆ, ಆಚರಣೆ ಇಲ್ಲ"

ಇಂದು ಏಸುಕ್ರಿಸ್ತ ಬಂದರೆ ಯೂರೋಪ್ ಮತ್ತು ಅಮೇರಿಕಾದಲ್ಲಿರುವ ಕ್ರೈಸ್ತ ಧರ್ಮವನ್ನು ನೋಡಿ ಸಂತೋಷಪಡುತ್ತಾನೆಯೆ? ನಿನ್ನ ಕೆನ್ನೆಗೆ ಒಬ್ಬರು ಏಟುಕೊಟ್ಟರು ಎರಡನೆ ಕೆನ್ನೆಯನ್ನು ತೋರಿಸು ಎಂದು ಏಸುಕ್ರಿಸ್ತನು ಹೇಳಿದನು. ಇಂದು ಇದನ್ನು ಯಾರು ಆಚರಿಸುತ್ತಿದ್ದಾರೆ? ಇಂದು ಲೆಕ್ಕಕ್ಕೆ ಪ್ರಪಂಚದಲ್ಲಿ ಕೋಟ್ಯಾಂತರ ಮಂದಿ ಕ್ರೈಸ್ತರಿದ್ದಾರೆ. ಅದೇ ಸ್ಥಿತಿ ಇಸ್ಲಾಮಿನದೂ ಆಗಿದೆ. ಇಸ್ಲಾಮಿನ ಅನೇಕ ದೊಡ್ಡ ದೊಡ್ಡ ರಾಜರುಗಳಿದ್ದರು. ಪ್ರಜೆಗಳೂ ಮುಸಲ್ಮಾನರೆಂದು ಕರೆದುಕೊಳ್ಳುವವರು ಸಾವಿರಾರು ಮಂದಿ ಇದ್ದರು. ಅದು ಇಸ್ಲಾಮಿನ ಪ್ರಚಾರವೇ? ಈಗಲೂ ಅಂಬೆಡ್ಕರರ ಜೊತೆಯಲ್ಲಿ ಎರಡು ಲಕ್ಷ ಮಂದಿ ಬೌದ್ಧರಾದುದನ್ನು ನಾವು ಕಂಡಿದ್ದೇವೆ. ಇಂತಹ ಧರ್ಮಾಂತರದಿಂದ ಭಗವಾನ್ ಬುದ್ಧನಿಗೆ ಸಂತೋಷವಾಗುತ್ತದೆಯೆ? ಅವನು ಹೀಗೆ ಲಕ್ಷಾಂತರ ಜನರಿಗೆ ಧೀಕ್ಷೆ ಕೊಟ್ಟಿದ್ದನೆ? ಲಕ್ಷಾಂತರ ಜನ ಒಂದೇ ಗಳಿಗೆಯಲ್ಲಿ ಇನ್ನೊಂದು ಧರ್ಮಕ್ಕೆ ಸೇರಿ ಬಿಡಲು ಧರ್ಮ ಎಂದರೆ ಅದೊಂದು ಆಟವೆ? ಸ್ವಲ್ಪವೂ ಆಚರಣೆ ಇಲ್ಲ. ಧರ್ಮದ ಹೆಸರಿನಲ್ಲಿ ಜಗಳ ಮಾತ್ರ ನಡೆಯುತ್ತದೆ. ಆದ್ದರಿಂದ ಧರ್ಮದೊಡನೆ ರಾಜಸತ್ತೆ ಜೊತೆಯಾದಂದಿನಿಂದ ಧರ್ಮಕ್ಕೆ ತುಂಬಾ ಹಾನಿಯಾಯಿತು. ಇದರ ಪರಿಣಾಮವಾಗಿ ಇಂದು ಸಾವಿರಾರು ಲಕ್ಷಾಂತರ ಜನರು ಧಾರ್ಮಿಕರೆನ್ನಿಸಿಕೊಳ್ಳುವುದಕ್ಕಿಂತಲೂ ತಮ್ಮನ್ನು ನಾಸ್ತಿಕರೆನ್ನಿಸಿಕೊಳ್ಳಲು ಸಂತೋಷಪಡುತಾರೆ.

ಆದ್ದರಿಂದ ರಾಜಸತ್ತೆಯ ಮೂಲಕ ಸದ್ವಿಚಾರ ಅಥವ ಸದ್‌ಧರ್ಮ ಹರಡಬಲ್ಲುದೆಂಬ ಕಲ್ಪನೆಯನ್ನೇ ಮನಸ್ಸಿನಿಂದ ತೆಗೆದುಹಾಕಿರಿ. ಆದರೆ ನಿಜವಾದ ಅರ್ಥದಲ್ಲಿ ರಾಜಸತ್ತೆ ಧರ್ಮದೊಡನೆ ಸೇರಿದರೆ ಧರ್ಮ ರಾಜಸತ್ತೆಯನ್ನೇ ಅಳಿಸಿಬಿಡುತ್ತದೆ. ಎರಡೂ ಜೊತೆಯಲ್ಲಿರುವುದಿಲ್ಲ. ರಾಜಸತ್ತೆಯೊಡನೆ ಧರ್ಮ ಸೇರಿದರೆ ಅದು ರಾಜಸತ್ತೆಯನ್ನು ಮುರಿದುಬಿಡುತ್ತದೆ. ಇನ್ನೊಬ್ಬರ ಮೇಲೆ ಅಧಿಕಾರ ನೆಡಸುವುದು ಧರ್ಮ ವಿಚಾರವಲ್ಲ. ಎಲ್ಲರ ಸೇವೆಯನ್ನೂ ಮಾಡುವುದು, ಪ್ರೇಮದಿಂದ ತಿಳಿಸುವುದೇ ಧರ್ಮ ವಿಚಾರ. ಲಕ್ಷಾಂತರ ಜನ ಒಂದೇ ಗಳಿಗೆಯಲ್ಲಿ ಧರ್ಮನಿಷ್ಠರಾಗಿಬಿಟ್ಟರೆ, ಅದು ಧರ್ಮನಿಷ್ಠೆಯೇ?

–ವಿನೋಬಾ

ಶೇಕ್ಸಪೀಯರ್: ಒಂದು ಪರಿಚಯ

–ಕಮಲಾಕರ ಕಡವೆ

ಶೇಕ್ಸಪೀಯರ್: ಒಂದು ಅನನ್ಯ ಹೆಸರು. ಆ ಹೆಸರು ಯಾರೇ ಹೊತ್ತಿರಲಿ, ಎಲ್ಲಿಯೇ ಎತ್ತಿರಲಿ ಅದು ನೆನಪಿಸುವುದು ಮಾತ್ರ ಒಂದು ವ್ಯಕ್ತಿಯನ್ನು. ಅದೊಂದು ಅಂಕಿತನಾಮವೇ ಅಲ್ಲವೇನೋ ಎಂಬಷ್ಟು ಅಸದೃಶ ಅಥವಾ ಅದೆಷ್ಟೋ ಕೃತಿಗಳೊಂದಿಗೆ, ಕೃತಿರಚನಾ ವಿಧಾನದೊಂದಿಗೆ, ಕೃತಿಗಳ ಆಂತರಿಕ ವಿಶ್ವದಾಕಾರದೊಂದಿಗೆ ತಗುಲಿಕೊಂಡಿರುಒಂದು ವ್ಯಕ್ತಿಯ ಪ್ರತೀಕವದು.

ಶೇಕ್ಸಪೀಯರ್: ಕಲ್ಪನಾಶಕ್ತಿಯ ಮೇರುಪರ್ವತ; ಅಕ್ಷರಲೋಕದ ಮಿಥಿಕ; ಸಾಹಿತ್ಯ ಕ್ಷೇತ್ರದ ಚಿದಂಬರ ರಹಸ್ಯ; ಸೃಷ್ಟಿಶಿಲತೆಗೊಂದು ಪರ್ಯಾಯ ಪದ.

ಶೇಕ್ಸಪೀಯರ್: ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಅಥವಾ ಇಂಗ್ಲೀಷ್ ಭಾಷೆಯನ್ನು ಅಥವಾ ಎಲ್ಲೇ ಆಗಲಿ ಕಾವ್ಯವನ್ನು ಒಂಟಿಯಾಗಿ ಪ್ರತಿನಿಧಿಸಬಲ್ಲ ಧೀಮಂತಿಕೆಯ ಏಕಮೇವ ಸಾಹಿತಿ.

ಶೇಕ್ಸಪೀಯರ್: ಪ್ರತಿ ಪೀಳಿಗೆಗೂ ಪರಿವರ್ತನೆಗೊಳ್ಳುವ ಅಭಿರುಚಿಗೆ, ಸಾಹಿತ್ಯಸ್ವಾದನೆಯ ಪ್ರಕಾರಗಳಿಗೆ, ಬದಲಾಗುವ ಕಾಲಕ್ಕೆ ತಕ್ಕಂತೆ ರೂಪುಗೊಳ್ಳವ ಸಾಹಿತ್ಯ ವಸ್ತುವಿಧಾನಗಳಿಗೆ ಹೊರತಾಗಿ ಎಂದೆಂದೂ ಮಾಸದೇ ಉಳಿದಿರುವ ಪ್ರಖರ ಚಿತ್ರ.

ಈ ಶೇಕ್ಸಪಿಯರ್‌ನ ಜೀವನದ ಕುರಿತು ನಮಗಿರುವ ಮಾಹಿತಿಗಳು ನಿಖರವಲ್ಲ. ಹಾಗಾಗಿ, ಅವನ ನಾಟಕಗಳಂತೆಯೇ ಅವನ ಜೀವನವೂ ಸಹ ಕತೆಗಳ ಸಾಗರ. ಅವುಗಳಲ್ಲಿ ಎಷ್ಟು ನಿಜವೋ, ಎಷ್ಟು ಸುಳ್ಳೋ. ಆದರೆ ಕಥನಗಳ ಸರದಾರನಾದ ಶೇಕ್ಸಪಿಯರ್‌ನಿಗೆ ಈ ಕುರಿತು ಅಭ್ಯಂತರವೇನೂ ಇರುತ್ತಿರಲಿಲ್ಲ ಬಿಡಿ.

ಲಜ್ಜೆಯಲ್ಲಿ ಶೇಕ್ಸಪಿಯರ್ ಊರು ಬಟ್ಟು ಓಡಿಹೋದ ಕಳ್ಳರ ಕಸುಬಿಗೆ ತುಂಬಲಾರದ ನಷ್ಟ. ವಿಶ್ವ ಸಾಹಿತ್ಯಕ್ಕಾದ ಲಾಭ ಎನ್ನೋಣವೇ?

ರಾಣಿ ಎಲಿಜಬೆತ್‌ಳ ಕಾಲದಲ್ಲಿ ಕ್ಯಾಥೊಲಿಕ್ಕ ಧರ್ಮೀಯರಿಗೆ ಕಿರುಕುಳ ಕೊಡುತ್ತಿದ್ದರು. ಪ್ರಸಿದ್ಧ ಶೇಕ್ಸ್‌ಪಿಯರ್ ಪಂಡಿತ 'ಸ್ಟೀಫನ್ ಗ್ರೀನ್‌ಬ್ಲಾಟ್' ಊಹೆಯೆಂದರೆ, ಶೇಕ್ಸ್‌ಪೀಯರ್‌ನ ತಂದೆ ಜಾನ್ ಶೇಕ್ಸ್‌ಪೀಯರ್ ಕ್ಯಾಥೊಲಿಕ್ ಗೂಢಚರನಾಗಿದ್ದ. ದೇಶದ್ರೋಹದ ಆಪಾದನೆಯ ಮೇಲೆ ೧೫೮೧ರಲ್ಲಿ ವಧಿಸಲ್ಪಟ್ಟ; ಎಡ್ಮಂಟ್ ಕ್ಯಾಂಪಿಯನ್ ತಯಾರಿಸಿದ ಗುಪ್ತ ಪುಸ್ತಿಕೆಯೊಂದು ಈ ಕುರಿತು ಪ್ರಕಾಶ ಚೆಲ್ಲುತ್ತಿದೆ. ಅಲ್ಲದೆ ಲಿಚ್‌ಫೀಲ್ಡ್ನ ರಿಚರ್ಡ್ ಡೇವೀಸ್ ಕೂಡ ಹಾಗೆ ಹೇಳಿರುವ ಪುರಾವೆ ಇದೆ. ಗ್ರೀನ್‌ಬ್ಲಾಟ್ ಪ್ರಕಾರ ಭೂಗತ ಕ್ಯಾಥೊಲಿಕ್ ಪೂಜಾರಿಗಳ ನಡುವೆ ಸಂದೇಶ ರವಾನೆ ಮಾಡುವ

ಸಮಯದಲ್ಲಿಯೇ ವಿಲಿಯಂ ಶೇಕ್ಸ್‌ಪಿಯರ್ ಆನ್ ಹ್ಯಾಥವೆಯ ಸಮೀಪಕ್ಕೆ ಬಂದಿದ್ದು.

ಶೇಕ್ಸ್‌ಪಿಯರ್‌ನೆಂಬ ಈ ಅದ್ಭುತ ಕಲ್ಪಕ ಶಕ್ತಿಯ ಬರಹಗಾರ ಜಗದಗಲ ಕೋಟಿಗಟ್ಟಲೆ ಓದುಗರನ್ನು, ನೋಡುಗರನ್ನು ತನ್ನ ಕಾವ್ಯ ಶಕ್ತಿಯಲ್ಲಿ ಸಂಮೋಹಿಸಿರಬಹುದು. ಆದರೆ, ಕೆಲವು ಪಂಡಿತರ ಪ್ರಕಾರ ಶೇಕ್ಸ್‌ಪಿಯರ್‌ನಿಗಿದ್ದಂತ ಹಿನ್ನೆಲೆಯ ವ್ಯಕ್ತಿ ಅಂತಹ ಸಾಹಿತ್ಯ ಸೃಷ್ಟಿ ಮಾಡಿರಲು ಸಾಧ್ಯವಿಲ್ಲ. ಅವನ ಹೆಸರಲ್ಲಿ ಇತರರು ಬರಿದಿರಬಹುದು ಅಥವಾ ಆ ಕಾಲದ ವಾಡಿಕೆಯಂತೆ ಇತರರೊಡಗೂಡಿ ಬರಿದಿರಬಹುದು ಅನ್ನುತ್ತಾರೆ ಈ ವಾದಬದ್ಧರು.

ಶೇಕ್ಸ್‌ಪಿಯರ್‌ನಷ್ಟು ಸತತವಾಗಿ ಪ್ರದರ್ಶಿಸಲ್ಪಡುವ ಮತ್ತು ಅನುವಾದಿಸಲ್ಪಟ್ಟಿರುವ ಬೇರೆ ಲೇಖಕನಿಲ್ಲ. ಆದರೆ, ಶೇಕ್ಸ್‌ಪಿಯರ್ ತಾನೇ ಒಂದೇ ಒಂದು ನಾಟಕವನ್ನೂ ಪ್ರಕಟಿಸಿರಲಿಲ್ಲ. ಬಹುಶಃ ಆ ಕಾಲದಲ್ಲಿ ಪ್ರಕಟನೆಯಿಂದ ಹೆಚ್ಚು ಉತ್ಪನ್ನ ಇರಲಿಲ್ಲವೆನ್ನುವ ಕಾರಣಕ್ಕಿರಬಹುದು. ನಮಗೆ ಶೇಕ್ಸ್‌ಪಿಯರ್ ಓದಲು ಸಿಗುತ್ತಿರುವುದರ ಕಾರಣೀಭೂತರೆಂದರೆ ಇಬ್ಬರು ನಟರು: ಜಾನ್ ಹೆಮ್ಮಿಂಗ್ಸ್ ಮತ್ತು ಹೆನ್ರಿ ಕಾಂಡೆಲ್. ಇವರು, ‘ಖ್ಞಿಜ ಈುಧಿಣ ಈಂಟುಂ’ ಎಂಬ ಹೆಸರಿನಲ್ಲಿ ೧೬೨೩ರಲ್ಲಿ ಶೇಕ್ಸ್‌ಪಿಯರ್‌ನ ೩೬ ನಾಟಕಗಳನ್ನು ಪ್ರಕಟಿಸಿದರು:ಅವನ ಮೇಲಿನ ಪ್ರೀತಿಯಿಂದ. ೧೫೯೯ರಲ್ಲಿ ಶೇಕ್ಸ್‌ಪಿಯರ್‌ನ ಕಂಪನಿ ಲಂಡನ್ನಿನ ಹೊರವಲಯದಲ್ಲಿ ಕಟ್ಟಿದ ‘ದಿ ಗ್ಲೋಬ್’ ಹೆಸರಿನ ಥಿಯೇಟರು ಬಹಳ ಕಾಲ ಉಳಿಯಲಿಲ್ಲ. ಯಾಕೆಂದರೆ, ೧೬೧೩ರಲ್ಲಿ ನಾಟಕವೊಂದರ ದೃಶ್ಯದಲ್ಲಿ ಸಿಡಿಸಿದ ತೋಪಿನಿಂದಾಗಿ ಬೆಂಕಿ ಹೊತ್ತಿ, ತಡಿಕೆಯ ಛಾವಣಿಯ ಆ ಥಿಯೇಟರು ಸುಟ್ಟುಹೋಯಿತು. ೧೯೯೭ರಲ್ಲಿ ಇದನ್ನು ಮತ್ತೆ ನಿರ್ಮಿಸಲಾಗಿದೆ. ಪ್ರವಾಸಿಗರಿಗಾಗಿ ಅಲ್ಲೀಗ ಶೇಕ್ಸ್‌ಪಿಯರ್ ನಾಟಕಗಳ ಪ್ರದರ್ಶನ ಇರುತ್ತದೆ.

ಬೆನ್ ಜಾನ್ಸನ್ ಪ್ರಕಾರ ಶೇಕ್ಸ್‌ಪಿಯರ್ ಒಮ್ಮೆಬರೆದದ್ದನ್ನು ಮತ್ತೆ ತಿದ್ದುತ್ತಿರಲಿಲ್ಲವಂತೆ. ಶೇಕ್ಸ್‌ಪಿಯರ್ ನಾಟಕಕಾರನಷ್ಟೇ ಅಲ್ಲ, ನಟನೂ ಆಗಿದ್ದದ್ದು ನಮಗೆಲ್ಲ ಗೊತ್ತಿದೆ. ಅವನ ಪ್ರಖ್ಯಾತ ನಾಟಕ ‘ಹ್ಯಾಮ್ಲೆಟ್’ನಲ್ಲಿ ಶೇಕ್ಸ್‌ಪಿಯರ್ ಭೂತದ ಪಾತ್ರ ಮಾಡಿದ್ದನಂತೆ.

ಆರ್.ಡಬ್ಲ್ಯೂ.ದೇಸಾಯಿ ಎಂಬ ಭಾರತೀಯ ಶೇಕ್ಸ್‌ಪಿಯರ್ ತಜ್ಞ ೧೯೭೯ರಲ್ಲಿ ‘ಹ್ಯಾಮ್ಲೇಟ್ ಸ್ಟಡೀಸ್’ ಎಂಬ ಸಂಶೋಧನಾ ಪತ್ರಿಕೆಯನ್ನು ಶುರುಮಾಡಿದ್ದರು. ಇದು ಸುಮಾರು ೨೦೦೪ರವರೆಗೆ ವರ್ಷಕ್ಕೆರಡು ಬಾರಿ ಪ್ರಕಟಮಾಡಿದ್ದರು. ಹೀಗೆ ಒಂದೇ ಕೃತಿಗೆ ಮುಡಿಪಾದ ಸಂಶೋಧನಾ ಪತ್ರಿಕೆ ಬೇರೆ ಎರಲಿಕ್ಕಿಲ್ಲ. ಹ್ಯಾಮ್ಲೇಟ್ ನಾಟಕದ ಇನ್ನೊಂದು ವಿಶೇಷವೆಂದರೆ ೧೯೬೦ರಿಂದೀಚೆಯಲ್ಲಿಯೇ ಇದು ೭೫ ಭಾಷೆಗಳಿಗೆ ಅನುವಾದಗೊಂಡಿದೆ. ಶೇಕ್ಸ್‌ಪಿಯರ್ ನಾಟಕಗಳು ೧೨ ವಿವಿಧ ದೇಶಗಳ ಹಿನ್ನೆಲೆ ಹೊಂದಿವೆ. ಅವುಗಳಲ್ಲಿ ಇಟಲಿ ಹೆಚ್ಚುಬಾರಿ ಕಾಣಿಸಿಕೊಳ್ಳತ್ತದೆ.

ಶೇಕ್ಸ್‌ಪಿಯರ್ ಸಮಕಾಲೀನ ನಾಟಕಕಾರನಾದ ಬೆನ್ ಜಾನ್ಸನ್, ಶೇಕ್ಸ್‌ಪಿಯರ್‌ನ ಬಗ್ಗೆ ಅಸೂಯೆ ಪಡುತ್ತಿದ್ದರೂ, ಅವನ ಮರಣದ ನಂತರ 'ಅವನು ಯಾವೊಂದು ಕಾಲಕ್ಕೆ ಸಲ್ಲದ, ಸಾರ್ವಕಾಲಿಕ' ಎಂದು ಸಂಭ್ರಮಿಸುತ್ತಾನೆ. ನಾಲ್ಕು ಶತಕಗಳ ಕಾಲ ಪಾಶ್ಚಿಮಾತ್ಯ ಸಾಹಿತ್ಯದ ಅತ್ಯಧಿಕ ಜನಪ್ರಿಯ ನಾಟಕಕರ, ಅತಿ ಮುಖ್ಯ ಮತ್ತು ಸರ್ವಶ್ರೇಷ್ಠ ಬರಹಗಾರನೆಂದು ಸಹ ಶೇಕ್ಸ್‌ಪಿಯರ್‌ನನ್ನು ಪರಿಗಣಿಸಲಾಗುತ್ರದೆ. ಅವನ ಕುರಿತು ಬರಿದಿರುವ ಪುಸ್ತಕಗಳು, ಅವನ ಕೃತಿಗಳ ವಿಮರ್ಶೆ, ವಿಶ್ಲೇಷಣೆ ಮಾಡುವ ಪುಸ್ತಕಗಳು, ಅವನ ಸಾಹಿತ್ಯದ ಕುರಿತು ನಡೆದಿರುವ ಸಂಶೋಧನೆಗಳು ಇವೆಲ್ಲ ಎಣಿಕೆಗೆ ಮಿಗಿಲಾದದ್ದು. ಆದರ, ಸ್ಟ್ರಟ್‌ಫರ್ಡ್‌ನ ಈ ಲಘುಶಿಕ್ಷಿತ (ಜಾನ್ಸನ್: ಟಚಿಟಟ ಐಚಿಣುಟಿ ಚಿಟಿಜ ಟಜ ಉಡಿಜಜಜಿ), ಸಾಹಿತ್ಯವೆಂಬ ಪರಿಕಲ್ಪನೆಗೆ ಮತ್ತೊಂದು ಹೆಸರು ಅನ್ನುವಷ್ಟು ಶ್ರೇಷ್ಠ ಸಾಹಿತ್ಯ ಬರೆದದ್ದು ಹೇಗೆ? ಶೇಕ್ಸ್‌ಪಿಯರ್ ಸತ್ತು ನಾಲ್ಕುನೂರು ವರ್ಷಗಳಾದರೂ ಓದುಗರನ್ನು/ವೀಕ್ಷಕರನ್ನು ಚುಂಬಕದಂತೆ ಸೆಳೆದ ಶಕ್ತಿಯಾದರೂ ಏನು ಅವನ ಕೃತಿಗಳಲ್ಲಿ? ಅವನ ಈ ಕಾಲಾತೀತ ಪ್ರಭೆಗೆ ಅವನ ಕೃತಿಗಳಲ್ಲಿ ಕಾಣುವ ಯಾವ ಪ್ರತಿಭೆ ಕಾರಣವಿದ್ದೀತು? ಈ ಕುರಿತು ಹಲವಾರು ಪ್ರಮೇಯಗಳಿವೆ:

೧. ಶೇಕ್ಸ್‌ಪಿಯರ್‌ನ ಕೃತಿಗಳಲ್ಲಿ ಮಾನವೀಯ ಭಾವಿನೆಗಳ ಸಂಪೂರ್ಣ ಹರವು ಬಿಂಬಿತವಾಗಿದೆ. ಅವನ ಕಲರ ಮನುಷ್ಯ ಅನುಭವಗಳ ವಿಶಾಲ ವ್ಯಾಪ್ತೆಯನ್ನು ಗಾಢವಾಗಿ ಮತ್ತು ಉತ್ಕಟ ಕಾವ್ಯಾತ್ಮಕತೆಯೊಂದಿಗೆ ಪ್ರತಿನಿಧಿಸುತ್ತದೆ.
೨. ಕತೆಗಳನ್ನು ಹೊಸದಾಗಿ ಹೆಣೆಯದಿದ್ದರೂ ಅವುಗಳ ನಿರೂಪಣೆ, ವೈವಿಧ್ಯತೆ, ಸಾರ್ವಕಾಲಿಕತೆ, ಜಾಣತನ ಮತ್ತು ಆಕರ್ಷಕತೆಗಳಲ್ಲಿ ಶೇಕ್ಸ್‌ಪಿಯರ್‌ನನ್ನು ಸರಿಗಟ್ಟುವವರು ಯಾರೂ ಇಲ್ಲ.
೩. ಶೇಕ್ಸ್‌ಪಿಯರ್‌ನ ಪಾತ್ರಗಳು ಸಹ ಜಗತ್ತಿನಾದ್ಯಂತ ಜನಪ್ರಯತೆ ಕಂಡಿವೆ. ಅವನ ಪಾತ್ರಗಳಲ್ಲಿ ಕಾಣುವ ಮಾನಸಿಕ ಸೂಕ್ಷ್ಮತೆ, ಸಂಕೀರ್ಣತೆ, ದೃಷ್ಟಿಕೋನದ ಬಹುತ್ವ, ಇತ್ಯಾದಿಗಳೆಲ್ಲದರೊಂದಿಗೆ ಒಂದು ಬಗೆಯ ಸರಳ ಮಾನವೀಯತೆ ಮುಂತಾದ ಗುಣಗಳು.
೪. ಶೇಕ್ಸ್‌ಪಿಯರ್‌ನ ಭಾಷಾ ಪ್ರಯೋಗ ಈ ವಿಷಯದಲ್ಲಿಯಂತೂ ನಮ್ಮ ದೈನಂದಿನ ಮಾತಿನಲ್ಲಿ ಶೇಕ್ಸ್‌ಪಿಯರ್‌ನ ಹೆಸರು ಭಾಷೆಯ ಮೇಲಿನ ಪ್ರಭುತ್ವಕ್ಕೆ ಮತ್ತೊಂದು ಪದವೇ ಆಗಿ ಬಿಟ್ಟಿದೆ. ನುಡಿಗಟ್ಟುಗಳ ಬಳಕೆ. ಕಾವ್ಯಾತ್ಮಕತೆ, ಪನ್, ಜಾಣ್ನುಡಿ ಅರ್ಥಬಾಹುಳ್ಯ, ಇವುಗಳೆಲ್ಲ ನಮ್ಮನ್ನು ಮತ್ತೆ ಮತ್ತೆ ಶೇಕ್ಸ್‌ಪಿಯರ್‌ನ ಓದಿಗೆ ಕರೆಯುತ್ತವೆ.



ನನ್ನ ಪೂರ್ಣಾಂಗಿನಿ ಗಿರಿಜಾ ಇನ್ನಿಲ್ಲ

– ಸುರೇಂದ್ರ ಕೌಲಗಿ

ಐವತ್ತೈದು ವರ್ಷಗಳಷ್ಟು ಧೀರ್ಘಕಾಲ ಸಂಸಾರದ ನೌಕೆಗೆ ಹುಟ್ಟುಹಾಕಿದ ನನ್ನ ಅರ್ಧಾಂಗಿನಿ ಗಿರಿಜ ಕಳೆದ ಜೂನ್ ೨೩ ರಂದು ಪಂಚಭೂತಗಳಲ್ಲಿ ಲೀನವಾಗಿ ಹೋದಳು. ಅವಳು ಹೋದ ತರುವಾಯ ನಾವು ನಡೆಸಿದ್ದ ಸಂಸಾರದ ಸಿಹಿ–ಕಹಿ ನೆನಪುಗಳು, ವಿರಸ–ಸರಸಗಳ ನೆನಪುಗಳು ಬರತೊಡಗಿದವು. ಅವಳ ಪಾರ್ಥೀವ ಶರೀರವನ್ನು ಅಗ್ನಿದೇವತೆಗೆ ಸಮರ್ಪಣೆ ಮಾಡಿ ಜನಪದ ನಿಲಯಕ್ಕೆ ಹಿಂದಿರುಗಿದಾಗ ಮನೆ ತುಂಬ ಖಾಲಿ ಎನ್ನಿಸಿತು. ಗಿರಿಜೆ ಇಲ್ಲದ ಈ ಖಾಲಿ ಮನೆಯಲ್ಲಿ ಇನ್ನು ಮುಂದೆ ವಾಸಿಸುವುದು ಸಾಧ್ಯವಿಲ್ಲವೆಂಬ ವಿಚಾರ ಮನವನು ನೋಯಿಸತೊಡಗಿತು. ಆಗಲೇ ಗಿರಿಜಾ ಕೇವಲ ನನ್ನ ಪತ್ನಿ ಅಥವಾ ಅರ್ಧಾಂಗಿನಿ ಆಗಿರಲಿಲ್ಲ, ಬದಲಿಗೆ ಅವಳು ಧರ್ಮಪತ್ನಿ ಮತ್ತು ಪೂರ್ಣಾಂಗಿನಿ ಆಗಿದ್ದಳೆಂಬ ಸತ್ಯ ಮಸ್ತಕದಲ್ಲಿ ಸ್ಥಾಯಿಯಾಗಿ ನೆಲೆಗೊಂಡಿತು. ಐವತ್ತೈದು ವರ್ಷಗಳ ಹಿಂದೆ ಶ್ರೀರಂಗಪಟ್ಟಣದಲ್ಲಿ ಕಾವೇರಿ ನದಿ ತೀರದಲ್ಲಿ ಗಿರಿಜಾ ಮತ್ತು ನಾನು ಸಪ್ತಪದಿ ತುಳಿದಾಗ ಪುರೋಹಿತರು ಉಪದೇಶಿಸಿದ ವಚನಗಳು ಜ್ಞಾಪಕಕ್ಕೆ ಬಂದವು. ಸಪ್ತಪದಿಯಲ್ಲಿ ಬರುವ ಆಶಯಗಳಂತಯೆ ನನ್ನೊಂದಿಗೆ ಸಂಸಾರ ನಡೆಸಿದಳು ಗಿರಿಜಾ. ಮನೋಬಲ ಮತ್ತು ದೇಹಬಲ ಹೊಂದಲು ಇಟ್ಟ ಎರಡನೇಯ ಹೆಜ್ಜೆಯ ಆಶಯದಂತೆ ಗಿರಿಜಾ ಸಂಸಾರದುದ್ದಕ್ಕೂ ನನ್ನನ್ನು ಕಾಪಾಡಿಕೊಂಡು ಬಂದಳು. ಜನಪದ ಸೇವಾ ಟ್ರಸ್ಟನ್ನು ಸ್ಥಾಪಿಸಿದ ದಿನದಿಂದ ಅವಳು ಕಣ್ಮರೆಯಾಗುವವರೆಗೂ ನನ್ನ ಎಲ್ಲ ಸೇವಾ ಕಾರ್ಯಗಳಲ್ಲಿ ಮನೋಬಲ ಕೊಟ್ಟಳು. ಕೆಲವೊಂದು ಸಲ ಕೆಲವು ವಿಷಯಗಳಲ್ಲಿ ಭಿನ್ನಾಭಿಪ್ರಾಗಳು ಬಂದಿದ್ದವು. ಆದರೆ ಆ ಭಿನ್ನಾಭಿಪ್ರಾಯ ಉಳಿಯದೆ ಸಾಮರಸ್ಯತೆ ಉಂಟಾಗುತ್ತಿತ್ತು. ಮೊದಿಲಿನಂತೆಯೇ ಅವಳಿಂದ ಮನೋಬಲ ದೊರೆಯುತ್ತಿತ್ತು. ಇಂಥ ಏರಿಳಿತಗಳನ್ನು ಕಂಡ ಸಂಸಾರ ಐವತ್ತೈದು ವರ್ಷ ಸಾಗಿತು. ದೇಹಬಲದ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೇ. ಜೀವನದಲ್ಲಿ

ನಾನು ನಾಲ್ಕೈದು ಬಾರಿ ಗಂಭೀರ ಸ್ವರೂಪದ ಶಸ್ತ್ರಚಿಕಿತ್ಸೆಗಳಿಗೆ ಒಳಗಾಗಬೇಕಾಯಿತು; ಆಸ್ಪತ್ರೆಗಳಲ್ಲಿ ಹಲವಾರು ದಿನಗಳು ಇರಬೇಕಾಯಿತು. ಚಿಕಿತ್ಸೆ ಪಡೆಯುತ್ತಿದ್ದಾಗ ಮತ್ತು ಮನೆಗೆ ಹಿಂದಿರುಗಿದ ಮೇಲೆ ದೇಹಪುಷ್ಟಿಗೆ ಅಗತ್ಯವಾಗಿದ್ದ ಏನೆಲ್ಲಾ ಆಹಾರದ ಅಗತ್ಯವಿದೆ ಎಂಬುದನ್ನು ಗಮನದಲ್ಲಿರಿಸಿಕೊಂಡು ನಿಯಮಾನುಸಾರ ಮತ್ತು ಸಮಯಾನುಸಾರ ಕೊಟ್ಟು ಉಪಚರಿಸುತ್ತಿದ್ದಳು. ಆದ್ದರಿಂದ ಅಂಥ ಕಠಿಣ ಪ್ರಸಂಗಗಳಲ್ಲಿ ಪುನರ್ ಜನ್ಮ ಪಡೆದು ಈವರೆಗೆ ಬದುಕಿ ಬರಲು ಸಾಧ್ಯವಾಯಿತು. ಹೀಗೆ ಸಪ್ತಪದಿಯ ಎರಡನೆ ಹೆಜ್ಜೆಯ ಮಾತನ್ನು ಕರಾರುವಕ್ಕಾಗಿ ನಿರ್ವಹಿಸಿದಳು. ನಾಲ್ಕನೇಯ ಹೆಜ್ಜೆಯಾದ ಹಣ ಸಂಪಾದನೆ ಮಾಡುವ ಆಶಯ ಅದಕ್ಕೆ ಅಗತ್ಯ ಗುಣವಾದ ವ್ಯವಹಾರ ಶುದ್ಧತೆ ನನ್ನ ಗಿರಿಜೆಯಿಂದ ದೊರೆಯಿತು. ನನ್ನ ಸ್ವಧರ್ಮ ಗಾಂಧೀ ವಿಚಾರ ಆಧಾರಿತ ಸರ್ವೋದಯದ ಕೆಲಸ. ಆ ಕೆಲಸಕ್ಕೂ ಅಲ್ಪಸ್ವಲ್ಪ ಹಣ ಬೇಕೇಬೇಕು. ಅದಕ್ಕಾಗಿ ಸಂಪಾದನೆಯ ಮಾರ್ಗ ಶುದ್ಧವಾಗಿಬೇಕಾಗಿರುವುದು ಅಗತ್ಯ. ಅಂಥ ಧನಸಂಪಾದನೆಯಿಂದ ಮಾಡುವ ನಮ್ಮ ಸೇವಾ ಕಾರ್ಯದ ಫಲಾನುಭವಿಗಳ ಬಗ್ಗೆ ಮಮತೆ ಇರಬೇಕಾದುದು ಹಾಗೂ ಆತ್ಮೀಯತೆ ಹೊಂದಬೇಕಾದುದು ಮುಖ್ಯ. ಅದರ ಫಲವಾಗಿಯೇ ಅಂತ್ಯೋದಯದಂಥ ಕಾರ್ಯಕ್ರಮ ಹಾಕಿಕೊಳ್ಳಲುಸಾಧ್ಯವಾಯಿತು. ಅದರಲ್ಲಿ ಮುಖ್ಯವಾಗಿ ಅಂಗವಿಕಲರಿಗಾಗಿ ಸೇವೆ ಮಾಡುವ ಮೂಲಕ ಸೇವಾ ಕಾರ್ಯ ಪ್ರಾರಂಭಿಸಲು ಸಾಧ್ಯವಾಯಿತು. ಅಂಗವಿಕಲರಿಗಾಗಿ ಸೇವೆ ಮಾಡಲು ಬೇಕಾದಂಥ ಪ್ರಶಿಕ್ಷಣ ನಮಗಿರಲಿಲ್ಲ. ಇಬ್ಬರಿಗೂ ಮೊಟ್ಟಮೊದಲ ಬಾರಿಗೆ ಅಂಗವಿಕಲರ ಪರಿಚಯವಾದುದು ಮತ್ತು ಅವರ ಸಮಸ್ಯೆಗಳು ಗೊತ್ತಾದುದು. ಅಲ್ಲದೆ ಅಂಥ ವಿಶೇಷ ಪ್ರಕಾರದ ಸೇವೆ ಮಾಡಲು ಇರಬೇಕಾದ ಸ್ಥಳವಾಗಲೀ, ಮೂಲಭೂತ ಸೌಕರ್ಯಗಳಾಗಲೀ ಇರಲಿಲ್ಲ. ಅತ್ಯಂತ ಸಾಧಾರಣ ಹಳ್ಳಿ ಮನೆಯಲ್ಲಿ ವಿದ್ಯುತ್‌ದೀಪದ ಸಂಪರ್ಕವೂ ಇಲ್ಲದ ಮನೆಯಲ್ಲಿ ಸೇವಾ ಕಾರ್ಯವನ್ನು ಪ್ರಾರಂಭಿಸಲಾಯಿತು. ಎಲ್ಲಕ್ಕಿಂತ ಮಿಗಿಲಾಗಿ ಬೇಕಾಗಿದ್ದ ಹಣವೇ ಇರಲಿಲ್ಲ. ಇಂಥ ಹಿನ್ನೆಲೆಯಲ್ಲಿ ಅಂತ್ಯೋದಯದಂಥ ಕಾರ್ಯ ಮಾಡಲು ಸಾಧ್ಯವಾದುದಕ್ಕೆ ಗಿರಿಜೆಯ ಪೂರ್ಣ ಸಹಕಾರವೇ ಕಾರಣ. ನಾವಿಬ್ಬರೇ ಸಿಬ್ಬಂದಿ. ಎಲ್ಲ ಕೆಲಸವನ್ನು ನಾವೇ ಮಾಡಬೇಕಿತ್ತು. ಹೆಚ್ಚಿನ ಹೊರೆ ಸಹಜವಾಗಿಯೋ ಗಿರಿಜೆಯ ಮೇಲೆ ಬೀಳುತ್ತಿತ್ತು. ಮುಖ್ಯವಾಗಿ ಅಡಿಗೆ ಮಾಡುವುದು, ಮೇಲ್ವಿಚಾರಣೆ ಇತ್ಯಾದಿ.

ಆ ನಂತರ ಇನ್ನೊಂದು ಮುಖ್ಯ ಕಾರ್ಯಕ್ರಮ ಪ್ರಾರಂಭಿಸಲು ಸಾಧ್ಯವಾದುದು ಸಮಾಜದಲ್ಲಿ ನೊಂದ ಮಹಿಳೆಯರಿಗೆ ಆಶ್ರಯ, ಶಿಕ್ಷಣ, ಪುನರ್‌ವಸತಿ ಕೊಡುವ ಕೆಲಸ, ಈ ಕಾರ್ಯಕ್ರಮ ಪೂರ್ಣವಾಗಿ ಹೆಣ್ಣು ಮಕ್ಕಳಿಗೆ ಸಂಬಂಧಿಸಿದ್ದುದರಿಂದ ಗಿರಿಜೆಯ ಮೇಲೆ ಬಹು ಹೆಚ್ಚಿನ ಜವಾಬ್ದಾರಿ ಬೀಳಲು ಕಾರಣವಾಯಿತು. ಗಿರಿಜೆ ತಾನೂ ಓರ್ವ ವಿದ್ಯಾರ್ಥಿನಿಯಾಗಿ, ಮೇಲ್ವಿಚಾರಕಳಾಗಿ, ಎಲ್ಲರ ಗೆಳತಿಯಾಗಿ ನನ್ನ ಜೊತೆ ನಿಂತು ಕೆಲಸಮಾಡಿದಳು, ಐದಾರು ವರ್ಷಗಳಲ್ಲಿ ಸುಮಾರು ನೂರಕ್ಕೂ ಹೆಚ್ಚು ಮಹಿಳೆಯರು ಈ ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡರು. ಮಹಿಳೆಯರ ಪುನರ್‌ವಸತಿಗಾಗಿ ಪ್ರಾರಂಭವಾದ ಜನಪದ ಮುದ್ರಣಾಲಯದ ಕೆಲಸದಲ್ಲಿಯೂ ಗಿರಿಜೆಯ ಪಾತ್ರ ಬಹು ಮುಖ್ಯವಾಗಿತ್ತು. ಮುದ್ರಣ ನಂತರದ ಬಹುಪಾಲು ಕೆಲಸವನ್ನು ಗಿರಿಜೆ ನಿರ್ವಹಿಸುತ್ತಿದ್ದಳು. ಸಪ್ತಪದಿಯಲ್ಲಿ ಐದನೆಯ ಹೆಜ್ಜೆ ಸಂತಾನಪ್ರಾಪ್ತಿ ಎಂದಿರುವುದು. ಆ ಆಶಯವನ್ನು ಪೂರ್ಣಗೊಳಿಸಲೆಂಬಂತೆ ಎರಡು ಪುತ್ರ ಸಂತಾನಕ್ಕೂ, ಮುಂದೆ ಕ್ರಮೇಣ ಐದು ಮೊಮ್ಮಕ್ಕಳನ್ನು ಹೊಂದುವುದಕ್ಕೂ ಕಾರಣವಾದಳು ನನ್ನ ಗಿರಿಜೆ. ಏಳನೆಯ ಹೆಜ್ಜೆಯ ಆಶಯದಂತೆ ನಾವಿಬ್ಬರು ಜೀವನಪಥದಲ್ಲಿ ಎದೆಗುಂದದೆ ಬಾಳೋಣ ಎಂಬುದನ್ನು ಇಬ್ಬರೂ ಸೇರಿ ಪ್ರಾರಂಭಿಸಿದ, ಜನಪದ ಸೇವಾ ಟ್ರಸ್ಟಿನ ಸಾಮಾಜಿಕ ಕಾರ್ಯಗಳು ಮುನ್ನಡೆಯುವುದಕ್ಕೆ ಸಾಧ್ಯವಾಯಿತಷ್ಟೇ ಅಲ್ಲ, ಅದರ ಬೆಳವಣಿಗೆ ಮತ್ತು ವಿಸ್ತಾರಕ್ಕೂ ಕಾರಣವಾಯಿತು; ಮೂರನೆಯ ತಲೆಮಾರು ಸಹ ಟ್ರಸ್ಟ್ ಮೂಲಕ ನಿಷ್ಕಾಮ ಸೇವೆಯಲ್ಲಿ ತೊಡಗುವುದಕ್ಕೆ ಸಾಧ್ಯವಾಯಿತು. ಇದಕ್ಕೆಲ್ಲ ಮುಖ್ಯ ಕಾರಣ ನನ್ನ ಗಿರಿಜೆಯಲ್ಲಿದ್ದ ವಿಶೇಷ ಸ್ವಭಾವ. ಅದೊಂದು ವರಯೋಗ ಮಾರ್ಗ ಅವಳೆಂದೂ ಲೌಕಿಕ ಆಶೆಗಳಿಗೆ ಒಳಗಾದವಳಲ್ಲ; ಚಿನ್ನವೆಂದೂ ಬಯಸದ, ದುಬಾರಿ ಸೀರೆಯನ್ನೊಲ್ಲದ, ಪ್ರಚಾರ, ಮನ್ನಣೆ ಬಯಸದ, ಸಂಗ್ರಹ ಪ್ರವತ್ತಿಯಿರದ, ಸತ್ಯವನ್ನೇ ಪ್ರೀತಿಸುವವಳಾಗಿದ್ದಳು. ಹಣಕಾಸಿನ ವಿಷಯದಲ್ಲಿ ಅನಾಸಕ್ತಿ. ಲೇಕ್ಕಾಚಾರ, ಕರಾರುವಕ್ಕು, ಕುಟುಂಬ ಜೀವನ ಮತ್ತು ಸಂಸ್ಥೆಯ ಜೀವನ ಎರಡೂ ಹೆಣೆದುಕೊಂಡಿದ್ದಾಗ್ಯೂ ಅವುಗಳೆರಡಿನ ಮಧ್ಯದ ಲಕ್ಷ್ಮಣರೇಖೆಯನ್ನು ಪಾಲಿಸುವ ತಿಳುವಳಿಕೆ ಹೊಂದಿದ್ದಳು. ಡಿ.ವಿ.ಜಿ ತಮ್ಮ ಕಗ್ಗದಲ್ಲಿ ವರ್ಣಿಸಿದ ಒಂದು ಹೇಳುವ ಒಂದು ಮಾತಿನಂತೆ ನನ್ನ ಗಿರಿಜೆಯ ಜೀವನವತ್ತು. "ಹೊರಗೆ ಲೋಕಾಸಕ್ತಿ, ಒಳಗೆ ಅದರ ಸಕಲ ನಿರಾಸಕ್ತಿ, ಹೊರಗೆ ಕಾರ್ಯಧ್ಯಾನ, ಒಳಗೆ ಉದಾಸೀನ, ಹೊರಗೆ ಸಂಸ್ಕೃತಿಭಾರ, ಒಳಗದರ ತಾತ್ಸಾರ ಎಂಬ ರೀತಿಯಮಾತಿನಂತೆ ನನ್ನ ಗಿರಿಜೆಯ

ಜೀವನವಿತ್ತು. "ಹೊರಗೆ ಲೋಕಾಸಕ್ತಿ, ಒಳಗೆ ಅದರ ಸಕಲ ನಿರಾಸಕ್ತಿ, ಹೊರಗೆ ಕಾರ್ಯಧ್ಯಾನ, ಒಳಗೆ ಉದಾಸೀನ, ಹೊರಗೆ ಸಂಸ್ಕೃತಿಭಾರ, ಒಳಗದರ ತಾತ್ಸಾರ" ಎಂಬ ರೀತಿಯ ವರಯೋಗಮಾರ್ಗವಾಗಿತ್ತು. ಇದರ ಸಂಕೇತವೋ ಎಂಬಂತೆ ಗಿರಿಜೆಯ ಅಂತಿಮ ಯಾತ್ರೆ ನಡೆಯಿತು. ಯಾವ ಅಧಿಕಾರವಿಲ್ಲ, ಸ್ಥಾನವಿಲ್ಲ, ಹೆಸರಿಲ್ಲದ್ದಿದ್ದರೂ ತನ್ನ ಮೌನ ಸೇವಾಬಲದಿಂದ ಸಮಾಜದಲ್ಲಿ ಮನ್ನಣೆ ಪಡೆದಿದ್ದ ಗಿರಿಜಗೆ ಸುತ್ತಲಿನ ಅಪಾರ ಜನಸ್ತೋಮ ಭಾವಪೂರ್ಣವಾದ, ಆತ್ಮೀಯವಾದ ಶ್ರದ್ಧಾಂಜಲಿಯನ್ನು ಅರ್ಪಿಸಿತು. ಸಮಾಜದ ಎಲ್ಲ ವರ್ಗದ ಜನರು ಅಂತಿಮ ಯಾತ್ರೆಯಲ್ಲಿ ಭಾಗಿಯಾದರು. ಪ್ರಕೃತಿ ಸಹ ಅದ್ಭುತ ರೀತಿಯಲ್ಲಿ ಸಹಕರಿಸಿತು. ಬೆಳಗಿನಿಂದಲೇ ಮೋಡಕವಿದ ವಾತಾವರಣವಿತ್ತು. ಸೂರ್ಯನ ದರ್ಶನವೇ ಇರಲಿಲ್ಲ. ಗಿರಿಜೆಯ ಇಚ್ಛೆಯಂತೆ ಹೊಸ ಜೀವನ ದಾರಿ ಕೇಂದ್ರದ ಬಟಾಬಯಲಿನಲ್ಲಿ ಅಗ್ನಿಸಂಚಯನದ ಮೂಲಕ ಅಂತ್ಯ ಸಂಸ್ಕಾರ ನಡೆಸಲು ತೀರ್ಮಾನಿಸಲಾಯಿತು. ಅದು ಮುಸ್ಸಂಜೆಯ ವೇಳೆ, ಗೋಧೂಳಿಯ ಸಮಯ, ಅಗ್ನಿ ಸ್ಪರ್ಶದ ಗಳಿಗೆ ಬರುತ್ತಿದ್ದಾಗ ಮೇಘಸ್ಫೋಟದ ಸೂಚನೆಗಳು ಬಲವತ್ತರವಾದವು, ತಣ್ಣನೆಯ ಗಾಳಿ ಬಿಸಲಾರಂಭಿಸಿತು. ಕೆಲವು ಹನಿಗಳೂ ಉದರಿದವು. ಇನ್ನೇನು ಬಯಂಕರ ಮಳೆಸುರಿಯುವದು ಎಂಬ ಆತಂಕ ಎಲ್ಲರನ್ನು ಕಾಡುತ್ತಿದ್ದಾಗ ಒಮ್ಮೆಲೆ ಆಶ್ಚರ್ಯಕರ ರೀತಿಯಲ್ಲಿ ಸಂಸ್ಕಾರದ ಆಸುತ್ತಲಿನ ಪ್ರದೇಶದಲ್ಲಿ ಸೂರ್ಯಪ್ರಕಾಶ ಬಿದ್ದಿತ್ತು! ಮಳೆಯ ಸುಳಿವೆ ಇಲ್ಲ. ಗಿರಿಜೆಯ ಜೀವನಾಂತ್ಯ ನೂರಾರು ಆತ್ಮಿಯರ ಮಧ್ಯ ಮುಕ್ತಾಯಗೊಂಡಿತಾದರೂ ಆ ಕ್ಷಣದಿಂದ ನನ್ನ ಗಿರಿಜೆಯ ದೇವಯಾನ ಪ್ರಾರಂಭವಾಯಿತು.

ಓಂ ಶಾಂತಿ: ಶಾಂತಿಃ ಶಾಂತಿಃ

ನಾಲ್ಕೂ ದಿಕ್ಕಿನಿಂದ....

ಇಷ್ಟಂತೂ ಸತ್ಯ ಸಮಹಾಭಾರತ ಮತ್ತು ರಾಮಾಯಣದಂಥ ಕೃತಿಗಳು ನಿರಂತರ ಅತ್ಯುತ್ತಮ ಸಾಹಿತ್ಯ ಕೃತಿಗಳ ನಿರ್ಮಾಣಕ್ಕೆ ಅದ್ಭುತ ಖನಿಜಗಳಿದಂತೆ. ಆದರೆ ಸಾಹಿತ್ಯಸೃಷ್ಟಿಕರ್ತನ ಮನಸ್ಸು ಧ್ಯಾನಸ್ಥತೆಯ ಕಡೆಗೆ ಸದಾ ಮುಖ ಮಾಡಿರಲೇಬೇಕಾಗಿರುತ್ತದೆ. ಅಂಥವರು ಭಿನ್ನಭಿನ್ನ ರೂಪದಲ್ಲಿ ಬಂದು ಹೋಗುತ್ತಲೇ ಇರುತ್ತಾರೆ. **–ಶೂದ್ರ ಶ್ರೀನಿವಾಸ**

ಗ್ರೇಟ್ ಡೇನ್ ಜಾತಿಗೆ ಸೇರಿದ ರಾಮು ನಾಯಿ ಅರೋವೇದ ತೋಟದ ಧ್ವನಿ ಆಗಿತ್ತು. ಒಂದೂ ಅರ್ಧ ವರ್ಷದ ಅವನು ಆಗಲೆ ೩ ಅಡಿಗೂ ಎತ್ತರ ಬೆಳೆದಿದ್ದ. ದೊಡ್ಡ ಧ್ವನಿಯಲ್ಲಿ ಬೊಗಳಿದರೆ ಬೆಟ್ಟದಿಂದ ಪ್ರತಿಧ್ವನಿಸುತ್ತುತು. ಅವನೊಬ್ಬ ವಿಶ್ವಾಸಿ ಕಾವಲುದಾರನಾಗಿದ್ದ. ಕಪ್ಪು ಬಣ್ಣದಿಂದ ಮಿರಿಮಿರಿ ಮಿಂಚುತ್ತಿದ್ದ. ರಾಮು ೨೬-೬-೨೦೧೫ ರ ಮಧ್ಯಾಹ್ನ ೩.೩೦ಕ್ಕೆ ಹೃದಯಾಘಾತದಿಂದ ನಿಧನ ಹೊಂದಿದ ಅವನಿಲ್ಲದೆ ಆರೋವೇದ ನಿಶ್ಯಬ್ದವಾಗಿದೆ. **–ಸಾಕ್ಷಿ**

ಪ್ಯಾಸಿಜಂ ಎಂಬ ರಾಕ್ಷಸ ಜೀವವು ಹಿಂದೂ ಧರ್ಮದಲ್ಲಾಗಲ್ಲಿ, ಇಸ್ಲಾಂ ಧರ್ಮದಲ್ಲಾಗಲಿ, ಕ್ರೈಸ್ತಧರ್ಮದಲ್ಲಾಗಲಿ, ಇಲ್ಲ. ಅದಿರುವುದು ಮಾರುಕಟ್ಟೆಯ ಅನೀತಿಯಲ್ಲಿ, ನಾವು ಮಾರುಕಟ್ಟೆಯ ಜೀವ ಉಳಿಸುತ್ತೇವೆಯೇ ಅಥವ ಮಾನವೀಯತೆಯ ಜೀವ ಉಳಿಸುತ್ತೇವೆಯೇ ಎಂದು ಬೇಗ ನಿರ್ಧರಿಸಬೇಕಿದೆ **–ಪ್ರಸನ್ನ**

ಭೂ ಕಬಳಿಕೆಗೆ ತಡೆ ಅಕ್ರಮ ಭೂಕಬಳಿಕೆಯ ಸಮಸ್ಯೆ ಕೇವಲ ಉತ್ತರ ಪ್ರದೇಶಕ್ಕೆ ಸೀಮಿತವಾಗಿಲ್ಲ. ಅದು ಭಾರತಾದ್ಯಾಂತ ಹರಡಿದೆ. ಸಾರ್ವಜನಿಕ ಭೂಮಿಯನ್ನು ಸುಲಭವಾಗಿ ಕಬಳಿಸುವ ತಂತ್ರವೇನೆಂದರೆ ಮರದಡಿಯಲ್ಲೊಂದು ಗುಂಡುಕಲ್ಲನ್ನು ಇಟ್ಟು ಪೂಜೆ ಮಾಡಿದರೆ ಸಾಕು, ಅದರ ಸುತ್ತಲೂ ಭಕ್ತಾದಿಗಳು ನೆರೆದು ಅಲ್ಲೊಂದು ಜಾತ್ರೆಯಾಗುತ್ತದೆ. ನಂತರ ಮಥುರಾದಲ್ಲಿ ನಡೆದಂತೆ ರಕ್ಕಸ ಬಲದಿಂದ ಭೂಮಿಯನ್ನು ಆಕ್ರಮಿಸಿಕೊಳ್ಳಲಾಗುತ್ತದೆ. ಅಂಥ ಅಕ್ರಮ ಭೂಕಬಳಿಕೆಯ ಗುರುತು ಸಿಕ್ಕೊಡನೆ ಅಧಿಕಾರಿಗಳು ಕ್ರಮ ಕೈಗೊಂಡು ಭೂಕಬಳಿಸಿದವರನ್ನು ಎತ್ತಂಗಡಿ ಮಾಡಿಸಬೇಕು. ಈ ರೀತಿ ಪ್ರಾರಂಭದಲ್ಲೆ ಮಾಡದೆ ಇದ್ದುದ್ದರಿಂದ ಮಥುರಾದಲ್ಲಿ ಆದ ಹಿಂಸೆ ನಮಗೆ

ಆಶ್ಚರ್ಯವನ್ನುಂಟುಮಾಡಬೇಕಿಲ್ಲ. ಇಂತ ಘಟನೆ ಯಾವುದೇ ಒಂದು ರಾಜಕೀಯ ಪಕ್ಷದ ಕಡೆಗೆ ಬೆರಳು ಮಾಡಿ ತೋರಿಸುವುದಿಲ್ಲ ಏಕೆಂದರೆ ಇಂಥ ಯುಕ್ತಾಯುಕ್ತ ವಿವೇಚನಾರಹಿತ ಕ್ರಮಗಳಿಗೆ ಎಲ್ಲ ರಾಜಕೀಯ ಪಕ್ಷಗಳು ಪಾಲುಗಾರರಾಗಿವೆ. ನಮ್ಮಲ್ಲಿಯ ವಿವೇಚನಾ ರಾಹಿತ್ಯ ಚೀಂತನೆಯನ್ನು ಬದಲಾಯಿಸಿಕೊಳ್ಳದಿದ್ದರೆ, ಮಥುರಾದಂಥ ಇನ್ನೂ ಅನೇಕ ಘಟನೆಗಳು ಸಂಭವಿಸಲಿವೆ. **–ಮೇಘನ. ಎ.**

ನ್ಯೂ ಸೌತ್ ವೇಲ್ಸ್, ಆಸ್ಟ್ರೇಲಿಯಾ.

ರಾಜಕೀಯ ಪಕ್ಷಗಳು: ಭಾರತ ಮುಕ್ತವಾಗಿರಬೇಕಾಗಿರುವುದು ಕಾಂಗ್ರೆಸ್ಸಿಂದ ಮಾತ್ರವಲ್ಲ. ಬಿ.ಜೆ.ಪಿಯಿಂದಲೂ ಮುಕ್ತವಾಗಬೇಕು. ಹಾಗಿಯೇ ಹಳೆಯ ಮಾದರಿಯಲ್ಲಿ ರಚನೆಯಾದ ಹಳೆಯ ಮಾರ್ಗಗಳನ್ನೇ ಚುನಾವಣೆಯಲ್ಲಿ ನೆಚ್ಚಿಕೊಂಡಿರುವ ಎಲ್ಲ ಪಕ್ಷಗಳಿಂದಲೂ ದೇಶ ಮುಕ್ತವಾಗಬೇಕಿದೆ. ಪಕ್ಷಗಳ ಸ್ಥಾನವನ್ನು ಹೊಸ ಹೆಸರಿನ, ಹೊಸ ಸಂರಚನೆಯ, ಹೊಸ ಚಿಂತನೆಯ, ಮತ್ತು ಮತದಾರರನ್ನು ನೇರಮಾರ್ಗದಲ್ಲಿ ಮುಟ್ಟಬಲ್ಲ ಪಕ್ಷಗಳು ಬಂದರೆ ಮಾತ್ರ ಹೊಸತನ್ನು ನಿರೀಕ್ಷಿಸಬಹುದು. **–ನಾರಾಯಣ. ಎ.**

ಸರ್ಕಾರಿ ಶಾಲೆ: ಶಿಕ್ಷಕರಿಗೆ ಉತ್ತಮ ರೀತಿಯ ತರಬೇತಿ ನೀಡುವ ಮೂಲಕ ಸರ್ಕಾರಿ ಶಾಲೆಗಳು ಅವನತಿಯತ್ತ ಸಾಗುವುದನ್ನು ತಡೆಗಟ್ಟಬೇಕಿದೆ. ಆರ್.ಟಿ.ಐ. ಅಡಿ ವಿದ್ಯಾರ್ಥಿಯ ಶುಲ್ಕವನ್ನು ಖಸಗಿ ಶಾಲೆಗಳಿಗೆ ಭರಿಸುವ ಬದಲು ಅದೇ ಶುಲ್ಕವನ್ನು ಶಾಲೆಗಳ ಆಧುನೀಕರಣಕ್ಕೆ ವಿನಿಯೋಗಿಸಿ ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಕರೆ ತರಬಹುದಾಗಿದೆ. **–ಲಕ್ಷ್ಮೀಕಾಂತ್. ಎಲ್. ವಿ.**

ಆರ್ಡರಲಿ: ಕೈ ಕೆಳಗಿನವರನ್ನು ಹೇಗೆ ಬೇಕಾದರೂ ನಡೆಸಿಕೊಳ್ಳಬಹುದು ಎಂಬ ಉಡಾಫೆ ಬಿಡಬೇಕು. ಕಾನ್‌ಸ್ಟೇಬಲ್‌ಗಳ ತರಬೇತಿಗೆ, ಸಂಬಳ ಸೌಕರ್ಯಕ್ಕೆ ಸಾರ್ವಜನಿಕ ತೆರಿಗೆ ಹಣ ಖರ್ಚಾಗುತ್ತದೆ. ಆದ್ದರಿಂದ ಅವರ ಸೇವೆ ಪೂರ್ಣವಾಗಿ ಸಮಾಜಕ್ಕೆ ಸಿಗಬೇಕು. ಅದು ಪ್ರಜೆಗಳ ಹಕ್ಕು. ಅದನ್ನು ಬಿಟ್ಟು ಆರ್ಡರ್ಲಿ ಪದ್ಧತಿಯ ಹೆಸರಿನಲ್ಲಿ ಮೇಲಧಿಕಾರಿಗಳ ಮನೆಗೆಲಸಕ್ಕೆ, ಅವರ ಕುಟುಂಬ ವರ್ಗದವರ ಚಾಕರಿ ಮಾಡಲಿಕ್ಕೆ ಪೋಲೀಸ್ ಕಾನ್‌ಸ್ಟೇಬಲ್‌ಗಳನ್ನು ನಿಯೋಜಿಸುವುದು ಸಾರ್ವಜನಿಕರ ತೆರಿಗೆ ಹಣದ ದುರ್ಬಳಕೆ, ಅವರು ಪಡೆದ ತರಬೇತಿಗೆ ಅಪಚಾರ. –ಪ್ರಜಾವಾಣಿ

ಗಮನಕ್ಕಾಗಿ...

ಸರ್ದಾರ್ ವಲ್ಲಭಬಾಯಿ ಪಟೇಲ್ ಸ್ಮಾರಕ ಟ್ರಸ್ಟ್ ಅವರು "ಇಪ್ಪತ್ತೊಂದನೇ ಶತಮಾನದ ಭಾರತದ ರೈತರು ಮತ್ತು ಸರ್ದಾರ್ ಪಟೇಲರ ವ್ಯವಸಾಯಕ ದೂರದರ್ಶಿತ್ವ" ಎಂಬ ವಿಷಯದ ಮೇಲೆ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಿದ್ದಾರೆ. ಸ್ಪಧೆಯಲ್ಲಿ ಗೆದ್ದವರಿಗೆ ಮೊದಲನೆ ಬಹುಮಾನ ೧೦,೦೦೦- ಎರಡನೆ ಬಹುಮಾನ ೭,೫೦೦- ಮೂರನೇ ಬಹುಮಾನ ೫,೦೦೦- ಹಾಗೂ ಸಮಾದಾನಕರ ಬಹುಮಾನ ಇಬ್ಬರು ಅಭ್ಯರ್ಥಿಗಳಿಗೆ ೨,೦೦೦- ನೀಡಲಾಗುವುದು.

ಪ್ರಬಂಧಗಳು ಹಿಂದಿ ಅಥವಾ ಇಂಗ್ಲಿಷಿನಲ್ಲಿ ಇರಬೇಕು; ೨೦೦೦ದಿಂದ ೫೦೦೦ಶಬ್ದಗಳು, ಕೈ ಬರಹದಲ್ಲಿ ಇರಬೇಕು ಅಥವಾ ಟೈಪ್ ಆಗಿರಬೇಕು; ಕಾಲೇಜ್ ಅಥವಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಮತ್ತು ಸಂಶೋಧಕರು ಸ್ಪರ್ಧೆಗೆ ಅರ್ಹರಾಗಿರುತ್ತಾರೆ; ಸ್ಪರ್ಧೆಯ ಕೊನೆಯ ದಿನಾಂಕ ೩೧ ಆಗಸ್ಟ್ ೨೦೧೬.

ಸೂಚನೆ: ಪ್ರಬಂಧವನ್ನು ಇ ಮೇಲ್ ಎಂ,ಎಸ್ ಮತ್ತು ಯುನಿಕೋಡ್‌ನಲ್ಲಿ ಇರಬೇಕು.

<u>ಅಂಚೆ ವಿಳಾಸ:</u> ಸರ್ದಾರ್ ವಲ್ಲಭಬಾಯಿ ಪಟೇಲ್ ಸ್ಮಾರಕ ಟ್ರಸ್ಟ್,
ಜಂತರ್ ಮಂತರ್ ರಸ್ತೆ,
ಹೊಸದಿಲ್ಲಿ – ೧೧೦ ೦೦೧
E-mail: svpstlibrary@gmail.com

* * *

ಸಾಬರಮತಿ ಫೆಲೊ
ಸಾಬರ್‌ಮತಿ ಸಂರಕ್ಷಣೆ ಮತ್ತು ಸ್ಮಾರಕ ಟ್ರಸ್ಟ್,
ಗಾಂಧಿ ಆಶ್ರಮ
ಅಹಮದಾಬಾದ್ ೩೮೦ ೦೨೭, ಗುಜರಾತ್

ಇವರು ವಸತಿ ಸಹಿತ ಫೆಲೋಶಿಪ್ ಕಾರ್ಯಕ್ರಮವನ್ನು ಘೋಷಿಸಿದ್ದಾರೆ. ಹೆಚ್ಚಿನ ವಿವರಕ್ಕಾಗಿ ಮತ್ತು ಅರ್ಜಿಯಪ್ರಕ್ರಿಯೆಗಾಗಿ ದಯಮಾಡಿ,

Please visit:
www.gandhiashramsabarmati.org

ಜನಪದ ಸೇವಾ ಟ್ರಸ್ಟ್ ಸಮಾಚಾರ

ಜನಪದ ಸೇವಾ ಟ್ರಸ್ಟ್ ಕಾರ್ಯಕರ್ತರೆಲ್ಲ ಸೇರಿ ತಿಂಗಳಿಗೊಮ್ಮೆ ಸಹಭೋಜನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಬೇಕೆಂಬ ತೀರ್ಮಾನದ ಪ್ರಕಾರ ಮೇ ತಿಂಗಳ ಕೊನೆಯ ದಿನ ಅಂಥ ಒಂದು ಕಾರ್ಯಕ್ರಮ ಸ್ನೇಹಮಯ ವಾತಾವರಣದಲ್ಲಿ ನಡೆಯಿತು. ಕಾರ್ಯಕ್ರಮದಲ್ಲಿ ಸಾಮೂಹಿಕ ಪ್ರಾರ್ಥನೆ, ಆಟೋಟ, ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಹಂಚಿಕೊಂಡು ಊಟ ಮಾಡುವ ಕಾರ್ಯಕ್ರಮ ನಡೆದವು. ಈ ಕಾರ್ಯಕ್ರಮದಲ್ಲಿ ಶ್ರೀ ಶೃಂಗೇರಿ ಮುರುಳಿಯವರು ಬಾಸೂರಿ ನುಡಿಸಿದುದು ಕಾರ್ಯಕ್ರಮಕ್ಕೆ ಮೆರುಗನ್ನು ತಂದಿತು; ಟ್ರಸ್ಟಿನಲ್ಲಿ ಇದ್ದುಕೊಂಡು ಸಾಮಾಜಿಕ ವಿಷಯದಲ್ಲಿ ಅನುಭವ ಪಡೆಯುತ್ತಿರುವ ಅಶೋಕ ಟ್ರಸ್ಟಲ್ಲಿ ತಯಾರಾಗುವ ಖಾದಿ ಬಟ್ಟೆಯ ಮೇಲೆ ಬ್ಲಾಕ್ ಪ್ರಿಂಟಿಂಗ್ ಕೈಗೊಳುವ ಉದ್ದೇಶದಿಂದ ಆ ವಿಷಯದಲ್ಲಿ ಶಿಕ್ಷಣ ಪಡೆಯಲು ಬೆಂಗಳೂರಿನಲ್ಲಿರುವ ಕೇಂದ್ರ ಸರ್ಕಾರದ ತರಬೇತಿ ಶಾಲೆಗೆ ಹೋಗಿದ್ದಾರೆ; ರಘು, ಕೌಶಿಕ್ ಮತ್ತು ಲಕ್ಷ್ಮೀ ಎಂಬ ಪದವೀಧರ ಯುವಕರು ಜನಪದ ಸೇವಾ ಟ್ರಸ್ಟನಲ್ಲಿ ತಯಾರಾದ ಖಾದಿ ಬಟ್ಟೆಯನ್ನು ಚನ್ನೈನಲ್ಲಿ ಒಂದು ಪ್ರದರ್ಶನದಲ್ಲಿಟ್ಟು ಮಾರಾಟಮಾಡಿ ಸುಮಾರು ೭೦೦೦೦/- ರೂಗಳಷ್ಟು ವ್ಯಾಪಾರ ಮಾಡುವುದರಲ್ಲಿ ಸಫಲರಾದರು.

ಸೇಮಿನಾರ್

ಸಂತೋಷ ಕೌಲಗಿಯವರು ಅಮೇರಿಕಾದ ಟೆಕ್ಸಾಸ್‌ನಲ್ಲಿ ನಡೆದ ಅಂತರಾಷ್ಟ್ರೀಯ ಶಿಬಿರದಲ್ಲಿ ಭಾಗವಹಿಸಲು ಅಲ್ಲಿಗೆ ಒಂದು ವಾರದ ಮಟ್ಟಿಗೆ ಹೋಗಿ ಬಂದರು.

ಶಿಶುವಿಹಾರ

೨೦೧೬ರ ಶೈಕ್ಷಣಿಕ ವರ್ಷದಲ್ಲಿ ಶ್ರೀಕೃಷ್ಣ ಕನ್ನಡ ಶಿಶುವಿಹಾರ ಪ್ರಾರಂಭವಾಯಿತು. ಮೇಲುಕೋಟೆಯಲ್ಲಿ ಇಂಗ್ಲೀಷ ಮಾಧ್ಯಮದ ಶಾಲೆಗಳು ಪ್ರಾರಂಭವಾಗಿವೆ. ಎರಡು-ಮೂರು ಅಂಗನವಾಡಿಗಳಿವೆ. ಈ ಎಲ್ಲ ಅಡಚಣೆಗಳ ಮಧ್ಯಯೂ ಶ್ರೀಕೃಷ್ಣ ಕನ್ನಡ ಶಿಶುವಿಹಾರಕ್ಕೆ ೨೦ ಮಕ್ಕಳು ಪ್ರವೇಶ ಪಡೆದಿದ್ದಾರೆ.

ಭೇಟಿ

ಟ್ರಸ್ಟಿನ ಅಭಿಮಾನಿ, ದಾನಿ ಶ್ರೀ ಕೆ.ಸುಬ್ಬರಾವ್‌ರವರ ಸಂಬಂಧಿಗಳಾದ ಶ್ರೀ ಯೋಗಾನರಸಿಂಹ, ಶಾಲಿನಿ; ಜನಪದ ವಿಚಾರದ ಮುದ್ರಕರಾದ ಶಿವನಂಜಪ್ಪ, ಚಂದ್ರಶೇಖರ, ಲೋಕೇಶ್ ಮತ್ತು ಅವರ ಪತ್ನಿ ಶೀಲಾರತ್ನ; ಉಮಾಶಂಕರ ಪೇರೊಡಿಯವರ ಮಕ್ಕಳಾದ ಇನಿ ಮತ್ತು ಇಂದು; ಕಾಡುಪ್ರಾಣಿಗಳ ಬಗ್ಗೆ ಅಧ್ಯಾಯನ ಮಾಡುತ್ತಿರುವ ಸಾಗರ ಎಂಬ ಯುವಕ; ಕುವೈತ್‌ನಲ್ಲಿರುವ ಟ್ರಸ್ಟಿನ ಅಭಿಮಾನಿ ಕಾಳಪ್ಪ ಮತ್ತು ಅವರ ಪತ್ನಿ ಭುವನೇಶ್ವರಿ; ರಾಯಚೂರು ಜಿಲ್ಲೆಯ ಸಿಂಧನೂರಿನಿಂದ

ಪಿ.ವೀರಭದ್ರಪ್ಪ, ಶರಣ ಬಸಪ್ಪ, ಗಂಗಮ್ಮ ಮತ್ತು ಸಂಗಡಿಗರು ಟ್ರಸ್ಟಿಗೆ ಭೇಟಿ ಕೊಟ್ಟರು.

ನಿಧನ

ಜನಪದ ಸೇವಾ ಟ್ರಸ್ಟಿನ ಸಂಸ್ಥಾಪಕ ಸದಸ್ಯರಲ್ಲಿ ಒಬ್ಬರಾಗಿ ಸಂಸ್ಥೆಯನ್ನು ೫೫ ವರ್ಷಗಳಿಂದ ನಡೆಸಿಕೊಂಡು ಬಂದು ತಮ್ಮ ಮಾತೃಹೃದಯದ ಮೂಲಕ ಎಲ್ಲರಿಗೂ ಅಮ್ಮನಾಗಿದ್ದ ಗಿರಿಜಾರವರು ಜೂನ ೨೩ರಂದು ದೈವಾಧಿನರಾದರು. ಅಪಾರ ಸಂಖ್ಯೆಯ ಅಭಿಮಾನಿಗಳು ಆ ದಿನ ಬಂದು ತಮ್ಮ ಶ್ರಂದ್ಧಾಂಜಲಿ ಸಲ್ಲಿಸಿದರು. ಹಿರಿಯ ಸರ್ವೋದಯ ನಾಯಕರಾದ ಎಚ್.ಎಸ್.ದೊರೆಸ್ವಾಮಿಯವರು, ಇ.ಪಿ.ಮೇನಣರವರು, ನರೇಂದ್ರರವರು, ಸಹ ಬಂದು ಶ್ರದ್ಧಾಂಜಲಿ ಸಲ್ಲಿಸಿದರು. ಮೇಲುಕೋಟೆಯ ಗ್ರಾಮಸ್ಥರೆಲ್ಲರೂ ಬಂದು ಗಿರಿಜಮ್ಮನವರ ಅಂತಿಮ ದರ್ಶನ ಪಡೆದರು. ಹತ್ತಿರದ ರಾಮಪುರ, ಹೊಸಹಳ್ಳಿಯ ಮಿತ್ರರು ಸಹ ಬಂದು ಹೋದರು.

ಸಾದರ – ಸ್ವೀಕಾರ

ಪುಸ್ತಕದ ಹೆಸರು	:	ಓದುವ ವೈಭವ
ಲೇಖಕರು	:	ಚಿತ್ರಾ ಅರ್ಜುನಪುರಿ
ಪ್ರಕಾಶಕರು	:	ಸಿದ್ದರೂಢ ಪ್ರಕಾಶನ ಕೆಂಗಲ್ ಹನುಮಂತಯ್ಯ ಬಡಾವಣೆ ಮದ್ದೂರು: 571 428, ಮಂಡ್ಯ ಜಿಲ್ಲೆ
ಪುಟಗಳು	:	200 ಬೆಲೆ : 160

ಪುಸ್ತಕದ ಹೆಸರು	:	ಪುಸ್ತಕ ಪ್ರದಕ್ಷಿಣೆ
ಲೇಖಕರು	:	ಚಿತ್ರಾ ಅರ್ಜುನಪುರಿ
ಪ್ರಕಾಶಕರು	:	ಸಿದ್ದರೂಢ ಪ್ರಕಾಶನ ಕೆಂಗಲ್ ಹನುಮಂತಯ್ಯ ಬಡಾವಣೆ ಮದ್ದೂರು: 571 428, ಮಂಡ್ಯ ಜಿಲ್ಲೆ
ಪುಟಗಳು	:	191 ಬೆಲೆ : 160

ಮೇಲ್ಕಾಣಿಸಿದ ಪುಸ್ತಕಗಳು ಚೈತ್ರಾ ಅರ್ಜುನಪುರಿಯವರ ಸಾಹಿತ್ಯದ ಮೊದಲ ಪ್ರಕಟಣೆಗಳು. 'ಪುಸ್ತಕ ಪ್ರದಕ್ಷಿಣೆ' ಎಂಬ ಗ್ರಂಥಕ್ಕೆ ಕೆ.ಸತ್ಯನಾರಾಯಣ್ ಮುನ್ನುಡಿ ಬರೆದಿದ್ದಾರೆ. ಎರಡನೆಯ ಗ್ರಂಥ 'ಓದುವ ವೈಭವಕ್ಕೆ' ಡಾ॥ ಎಂ.ಎಸ್ ಆಶಾದೇವಿ ಮುನ್ನುಡಿ ಬರೆದಿದ್ದಾರೆ. ಇವೆರಡು ಪುಸ್ತಕಗಳಲ್ಲಿ ಲೇಖಕಿಯು ವಿದೇಶಗಳಲ್ಲಿ ಕಂಡ, ಕೇಳಿದ ಮತ್ತು ಓದಿದ ವ್ಯಕ್ತಿಗಳ ವಿಷಯಗಳ ಬಗ್ಗೆ ಬರೆದಿದ್ದಾರೆ. ಜಗತ್ತಿನ ವಿವಿಧ ಸಾಧಕರು ಮತ್ತು ಅವರಬಗ್ಗೆವಿಚಾರಗಳ ಬಗ್ಗೆ ಕುತೂಹಲವಿದ್ದವರಿಗೆ ಮತ್ತು ತಿಳಿಯಬೇಕೇಂಬ ಆಸಕ್ತಿವುಳ್ಳವರಿಗೆ ಈ ಎರಡೂ ಪುಸ್ತಕಗಳು ಉಪಯುಕ್ತವಾಗಿವೆ.

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ನವೀಕರಿಸಿದ ಚಂದಾದಾರರು

ಶ್ರೀ ನಗರಿ ಬಾಬಯ್ಯ, - ಬೆಂಗಳೂರು
ಶ್ರೀ ವಿಜಯದೇವನ - ಪಟ್ಟಸೋಮನಹಳ್ಳಿ

ಹೊಸದಾಗಿ ಪತ್ರಿಕೆಗೆ ಚಂದಾದಾರರಾದವರು

ಶ್ರೀ ರಮಾನಂದ ರಾವ್. ಕುಂಜಾಲು, ಶ್ರೀ ಎನ್.ಶಿವಮೂರ್ತಿ ನಾಯಕ ಭದ್ರಾವತಿ, ಶ್ರೀ ಸಿ.ಚಂದ್ರಶೇಖರ್ ಪಣಕನಹಳ್ಳಿ, ಶ್ರೀ ಸಿದ್ದಪ್ಪ ಎಂ ಕಾಂತ ಕಲಬುರ್ಗಿ, ಶ್ರೀ ಎಂ.ಎಚ್.ರಾಜಪ್ಪ ಶಿವಮೊಗ್ಗ, ಶ್ರೀ ಆರ್.ಬಿ. ಚೌಹನ್ ಧಾರವಾಡ. ಶ್ರೀ ಪಿ.ಸಿ ವಿವೇಕಾನಂದ ಎಂ.ಎಸ್.ಸಿ ಪಟ್ಟಸೋಮನಹಳ್ಳಿ ಪಿ.ಎಸ್.ಐ.ಮೇಲುಕೋಟೆ. ಶ್ರೀ ವಿಶಾಲಾಕ್ಷಿ ನಾಗರಾಜ ಮಂಡ್ಯ, ಶ್ರೀ ಎನ್.ಟಿ.ಶ್ರೀನಿವಾಸರೆಡ್ಡಿ, ಶ್ರೀ ವೈ.ಎನ್.ಗೌಡ, ಶ್ರೀ ಎಂ.ಎಸ್. ಯೋಗನರಸಿಂಹ ಬೆಂಗಳೂರು. ಡಾ॥ ಸುರೇಶಗೌಡ, ಡಾ॥ ಎಸ್.ಜಿ.ಸಜ್ಜಲಗುಡ್ಡ ಕ್ಯಾದಿಗುಪ್ಪ, ಶ್ರೀ ಟಿ.ರಮೇಶ, ಶ್ರೀ ಎಸ್.ಬಿ. ಚಂಗಲೆ, ಕೊಪ್ಪಳ. ಡಾ॥ ಶಿವಪ್ರಸಾದ ಸಿ.ಎಂ, ಶ್ರೀ ಜಿ.ಎನ್.ರಘು, ಮೈಸೂರು, ಶ್ರೀ ಎಸ್.ಡಿ.ಮಲ್ಲೇಶ್, ಶ್ರೀ ಎಸ್. ಪ್ರವೀಣ್ ದೇಸಾಯಿ , ಪ್ರೊ॥ ಗಣಪತಿ ಬಸ್ತವಾಡ ಸುತ್ತತಿ ಅಂಚೆ ಬೆಳಗಾವಿ. ಡಾ॥ ಹೊನ್ನಾಂಜೆನಯ್ಯ ಡಿ.ಆರ್, ಶ್ರೀ ಎನ್. ನಾಗಭೂಷಣ, ಕುರಕುಂದ ರಾಯಚೂರು

ಇವರೆಲ್ಲರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ-ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ ಅಂಚೆ

KA / SK / MND / 470 / 2015-2017
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust Melkote,
Dist- Mandya - 571431. Phone : 08236 299854 Mob:9141700812
e-mail : janapada@yahoo.com - Web : janapada.org
Printed at chandragiri printers, Mandya- Mob: 9945651584, 9739743237